ಸಂಪುಟ 01 । ಸಂಚಿಕೆ 111 । ಸೋಮವಾರ 09 ಮಾರ್ಚ್ 2026 । ಪುಟ 4 । ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಉಸ್ತಾದ್ ಜಾಕಿರ್ ಹುಸೇನ್ ಜನನ

ಉಸ್ತಾದ್ ಜಾಕಿರ್ ಹುಸೇನ್ (ಜನನ ಮಾರ್ಚ್ 9, 1951) ವಿಶ್ವಪ್ರಸಿದ್ಧ ಭಾರತೀಯ ತಬಲಾ ವಾದಕ, ಸಂಗೀತ ಸಂಯೋಜಕ ಮತ್ತು ನಟ. ಪದ್ಮಭೂಷಣ (2002), ಪದ್ಮವಿಭೂಷಣ (2023) ಮತ್ತು ಗ್ರ್ಯಾಮಿ ಪ್ರಶಸ್ತಿ ಪುರಸ್ಕೃತರಾದ ಇವರು, ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ಫ್ಯೂಷನ್ ಸಂಗೀತದಲ್ಲಿ ಅಪಾರ ಕೊಡುಗೆ ನೀಡಿದ್ದಾರೆ. ಪ್ರಸಿದ್ಧ ತಬಲಾ ವಾದಕ ಉಸ್ತಾದ್ ಅಲ್ಲಾರಖಾ ಅವರ ಪುತ್ರರಾಗಿ ಇವರು ಬಾಲ್ಯದಲ್ಲೇ ಸಂಗೀತ ಕಲಿತರು.

## ಸುಭಾಷಿತ

ನಮ್ಮ ಅಂತರಂಗದ ಪುಸ್ತಕ ತೆರೆಯುವ ತನಕ ಉಳಿದೆಲ್ಲಾ ಪುಸ್ತಕಗಳು ನಿಷ್ಪ್ರಯೋಜಕ

ಸ್ವಾಮಿ ವಿವೇಕಾನಂದ

# ಅಂತರರಾಷ್ಟ್ರೀಯ ಮಹಿಳಾ ದಿನ
# ಬೆಂಗಳೂರಿನ ರಸ್ತೆಗಳಲ್ಲಿ 'ನಾರಿ ಶಕ್ತಿ ರೈಡ್'

ಬೆಂಗಳೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಶಿ ಫಾರ್ ಸೊಸೈಟಿ ಸಂಸ್ಥೆ, ಮದರ್‌ಹುಡ್ ಆಸ್ಪತ್ರೆ, ಏರ್ಪೋರ್ಟ್ (ಪ್ರೆಸ್ಟೀಜ್ ಟೆಕ್ ಕೋಲ್?ಡ) ಸಹಯೋಗದಲ್ಲಿ ಆಯೋಜಿಸಿದ್ದ ನಾರಿ ಶಕ್ತಿ ರೈಡ್ 2026 ಕಾರ್ಯಕ್ರಮ ನಡೆಯಿತು. ಇದು ನಗರದ ರಸ್ತೆಗಳಲ್ಲಿ ವಿಶೇಷ ಬೈಕ್ ರೈಡ್ ಮೂಲಕ ಮಹಿಳಾ ಸಬಲೀಕರಣಕ್ಕೆ ಹೊಸ ಸ್ಫೂರ್ತಿ ನೀಡಿತು.

ಬೆಳಿಗ್ಗೆ ಹೆಬ್ಬಾಳ ಫ್ಲೈಓವರ್ ಕೆಳಭಾಗದಲ್ಲಿರುವ ಮದರ್‌ಹುಡ್ ಆಸ್ಪತ್ರೆ, ಸಹಕಾರನಗರದಿಂದ ಆರಂಭವಾದ ಈ ನಾರಿ ಶಕ್ತಿ ರೈಡ್ ಅನ್ನು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರು ನಡೆಸಿದರು. ಬಳಿಕ ಈ ರ್ಯಾಲಿ ನಗರ ರಸ್ತೆಗಳ ಮೂಲಕ ಸಾಗುತ್ತಾ ಮಾಕ್ಸಿ ಬೆಂಗಳೂರು ಏರ್ಪೋರ್ಟ್, ಪ್ರೆಸ್ಟೀಜ್ ಟೆಕ್ ಕೋಲ್?ಡ, ನವರತ್ನ



ಅಗ್ರಹಾರದಲ್ಲಿ ಸಮಾರೋಪಗೊಂಡಿತು. ಕನ್ನಡ ಸುದ್ದಿ ಪೋರ್ಟಲ್ ಈ ರೈಡ್‌ನಲ್ಲಿ ಸುಮಾರು 50 ಮಹಿಳಾ ಬೈಕರ್ಸ್ ತಾಲಿರು ಫೌಂಡೇಶನ್‌ನ 20 ಮಹಿಳಾ ಆಟೋ ಚಾಲಕರು, 20 ಮಹಿಳಾ ಕಾರ್ ಚಾಲಕರು, ವೈದ್ಯರು, ವೃತ್ತಿಪರರು ಹಾಗೂ ಸೈಬರ್ ಸುರಕ್ಷತಾ ತಜ್ಞರು ಉತ್ಸಾಹದಿಂದ ಭಾಗವಹಿಸಿದರು.

ವಿಶೇಷವಾಗಿ ಭಾರತೀಯ ವಾಯುಪಡೆಯ ನಿವೃತ್ತ ವಿಂಗ್ ಕಮಾಂಡರ್ ಜೂಲಿ ರೋಸಿ ಅವರ ಉಪಸ್ಥಿತಿ ಕಾರ್ಯಕ್ರಮಕ್ಕೆ ಮತ್ತಷ್ಟು ಗೌರವ ತಂದಿತು. ನಗರದ ರಸ್ತೆಗಳಲ್ಲಿ ಮಹಿಳೆಯರು ಒಂದಾಗಿ ಸಾಗಿದ ಈ ಬೈಕ್ ರ್ಯಾಲಿ ಮಹಿಳೆಯರ ಧೈರ್ಯ, ಏಕತೆ ಮತ್ತು ಆತವಿಶ್ವಾಸದ ಪ್ರತೀಕವಾಗಿ ಮೂಡಿಬಂದಿತು. ರೈಡ್‌ನ ನಂತರ ಮಹಿಳೆಯರ ಶಕ್ತಿಯ ಕೇಂದ್ರ ಕುರಿತ ವಿಷಯದ ಮೇಲೆ ವಿಶೇಷ ಉಪನ್ಯಾಸ ನಡೆಯಿತು. ಕಾರ್ಯಕ್ರಮದ ವೇಳೆ ಮಾತನಾಡಿದ ಸಂಘಟಕರು, ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿರುವುದು ಸಮಾಜದ ಪ್ರಗತಿಯ ಸಂಕೇತವಾಗಿದ್ದು, ಇಂತಹ ಕಾರ್ಯಕ್ರಮಗಳು ಮಹಿಳೆಯರಲ್ಲಿ ಆತವಿಶ್ವಾಸವನ್ನು

4ನೇ ಪುಟಕ್ಕೆ

## ಬಿ.ಬಿ.ನಾಯಕ್ ಗೆ ಬಂಜಾರ ಸೇವಾ ಶಿರೋಮಣಿ ಪ್ರಶಸ್ತಿ ಪ್ರದಾನ

ನೈಜ್ಯ ದೇಸೆ ನ್ಯೂಸ್

ಸಮಾಜ ಸೇವಾ ಕ್ಷೇತ್ರದಲ್ಲಿನ ಕೊಡುಗೆಗಾಗಿ ಕಲಬುರಗಿ ಜಿಲ್ಲಾ ಬಂಜಾರ ಸೇವಾ ಸಂಘದ ಅಧ್ಯಕ್ಷರಾದ ಬಿ. ಬಿ.ನಾಯಕ್ ಗೆ ನವದೆಹಲಿಯ ಸಂತ ಸೇವಾಲಾಲ್ ಚಾರಿಟೇಬಲ್ ಟ್ರಸ್ಟ್ ವತಿಯಿಂದ ಬಂಜಾರ ಸೇವಾ ಶಿರೋಮಣಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.



ನವದೆಹಲಿಯ ಡಾ.ಅಂಬೇಡ್ಕರ್ ಇಂಟರ್ ನ್ಯಾಷನಲ್ ಸೆಂಟರ್ ನಲ್ಲಿ ಫೆ.28ರಂದು ಟ್ರಸ್ಟ್ ಆಯೋಜಿಸಿದ ಸಂತ ಸೇವಾಲಾಲ್ ಮಹಾರಾಜರ 287ನೇ ಜಯಂತಿ ಸಂದರ್ಭದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ಕಾರ್ಯಾಧ್ಯಕ್ಷರು ಹಾಗೂ ಮಾಜಿ ಸಂಸದರಾದ ಡಾ. ಉಮೇಶ್ ಜಾಧವ್ ಪ್ರಶಸ್ತಿ ಪ್ರದಾನ ಮಾಡಿದರು. ಉಚಿತ ಆರೋಗ್ಯ ಶಿಬಿರ ,ಕಣ್ಣಿನ ಉಚಿತ ಶಸ್ತ್ರ ಚಿಕಿತ್ಸಾ ಶಿಬಿರಗಳನ್ನು ಆಯೋಜಿಸಿ ಜನಪರ ಕೆಲಸ ಮಾಡಿದ ನಾಯಕ್ ಸಮಾಜಕ್ಕೆ ಇನ್ನಷ್ಟು ಉತ್ತಮ ಕೆಲಸ ಮಾಡಲು ಈ ಪ್ರಶಸ್ತಿ ಪ್ರೇರಣೆಯಾಗಲಿ ಎಂದು ಜಾಧವ್ ಶುಭ ಹಾರೈಸಿದರು.ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ಅಧ್ಯಕ್ಷ ಶಂಕರ್ ಪವಾರ್ ಮತ್ತಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ನೈಸರ್ಗಿಕ ಕೃಷಿ ಪದ್ಧತಿ ಅವಲಂಬಿಸಿ ಉತ್ತಮ ಆದಾಯ



ನೈಜ್ಯ ದೇಸೆ ನ್ಯೂಸ್

**ಅಪ್ಪಟ ನೈಸರ್ಗಿಕ ಕೃಷಿ ಪದ್ಧತಿ ಅವಲಂಬಿಸಿ ವಿವಿಧ ಬೆಳೆಗಳನ್ನು ಬೆಳೆದು, ಉತ್ತಮ ಆದಾಯ ಪಡೆಯುತ್ತ, ರೈತ ಸಮೂಹಕ್ಕೆ ಮಾದರಿಯಾಗಿದ್ದಾರೆ ಪದವೀಧರ ರೈತ ಹನುಮಂತಪ್ಪ ವಾಲಿಕಾರ್.ರೈತ ಹನುಮಂತಪ್ಪ ತಾಲ್ಲೂಕಿನ ತಳಕಲ್ ಗ್ರಾಮದವರು. ಮಣ್ಣು ನಂಬಿ ಬಂಡವಾಳ ಹಾಕಿದರೆ ಭೂತಾಯಿ ಎಂದಿಗೂ ಕೈಬಿಡುವುದಿಲ್ಲ ಎಂಬ ದೃಢ ನಂಬಿಕೆಯಿಂದ ಶ್ರಮವಹಿಸಿ ದುಡಿದು ಯಶಸ್ವಿಯತ್ತ ಸಾಗುತ್ತಿದ್ದಾರೆ.ತಮ್ಮ 3 ಎಕರೆ ಜಮೀನಿನಲ್ಲಿ ಸಂಪೂರ್ಣ ನೀರಾವರಿ ಮಾಡುತ್ತಿದ್ದಾರೆ.**

ತೋಟದ ಬದುವಿನ ಸುತ್ತಲೂ 100 ತೆಂಗಿ ಮರಗಳನ್ನು ಬೆಳೆಸಿದ್ದಾರೆ. 250 ಲಿಂಬೆ, 20 ಸಪೋಟಾ, 10 ಚಿಕ್ಕು ಗಿಡಗಳು, 15 ಜಂಬು ನೇರಳೆ ಗಿಡಗಳು, 80 ಕರಿಬೇವಿನ ಗಿಡಗಳು, 25 ಪಪ್ಪಾಯಿ ಸೇರಿದಂತೆ ವಿವಿಧ ತೋಟಗಾರಿಕೆ ಬೆಳೆಗಳನ್ನು ಬೆಳೆಯುವ ಮೂಲಕ ವರ್ಷವಿಡೀ ಆದಾಯ ಪಡೆಯುತ್ತಿದ್ದಾರೆ. ಒಂದೂವರೆ ಎಕರೆಯಲ್ಲಿ ವಿವಿಧ ಧಾನ್ಯ, ತರಕಾರಿ ಹಾಗೂ 30 ರೀತಿಯ ಬೇರೆಬೇರೆ 60 ಔಷಧ ಗಿಡಗಳನ್ನು ಬೆಳೆದಿದ್ದಾರೆ. ಚಕ್ರಮುನಿ, ಲೆಮನ್ ಗ್ರಾಸ್, ಬಿಲ್ವಪತ್ರೆ, ಇನ್ಸುಲಿನ್ ಹೀಗೆ ಅನೇಕ ಔಷಧ ಗಿಡಗಳನ್ನು ಬೆಳೆದಿದ್ದಾರೆ.

ಜಪಾನಿನ ಜನಪ್ರಿಯ ಕೃಷಿಕ ಮಸನೊಬು ಫುಕುವೊಕ ಅವರಿಂದ ಪ್ರೇರಿತರಾದ ತಳಕಲ್ ಗ್ರಾಮದ ಯುವಕ ನೈಸರ್ಗಿಕ ಪದ್ಧತಿಯ ಮೂಲಕ ಕೃಷಿಯಲ್ಲಿ ಯಶಸ್ಸನ್ನ ಕಂಡು ವರ್ಷಕ್ಕೆ ?15 ಲಕ್ಷದಿಂದ 20 ಲಕ್ಷ ಆದಾಯವನ್ನು ಪಡೆಯುತ್ತಿದ್ದಾರೆ. ಯಾವುದೇ ಕುಂಟೆ, ಎಡೆ ಕೃಷಿ ಸಲಕರಣೆಗಳ ಮೂಲಕ ವ್ಯವಸಾಯವನ್ನು ಮಾಡದೇ ಅತ್ಯಂತ ಸರಳವಾಗಿ ಕೃಷಿಯಲ್ಲಿ ಯಶಸ್ಸು ಸಾಧಿಸಿ ಅನೇಕ ಪ್ರಶಸ್ತಿಗಳನ್ನು ಮುಡಿಗೇರಿಸಿದ್ದಾರೆ. ಮಾ.8ರಂದು ಗ್ರಾಮದಲ್ಲಿ ರೈತರು ಹಾಗೂ ತಾವು ಸ್ವತಃ ಮಣ್ಣಿನೊಂದಿಗೆ ಮಾತುಕತೆ ಕಾರ್ಯಕ್ರಮವನ್ನು ಮಾಡುತ್ತಿದ್ದು, 500 ಜನ ರೈತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹನುಮಂತಪ್ಪ ಹೇಳಿದರು. ತಮ್ಮ ತೋಟದಲ್ಲಿ ಬೆಳೆದ ಬೆಳೆಯನ್ನು ಮಾರಾಟ ಮಾಡುತ್ತಿರುವ ರೈತ ಹನುಮಂತಪ್ಪ ಸರ್ಕಾರಿ ನೌಕರಿಯನ್ನು ಬಿಟ್ಟು 15 ವರ್ಷಗಳಿಂದ ಕೃಷಿಯನ್ನು ನಂಬಿ ಯಶಸ್ಸು ಕಂಡಿದ್ದೇನೆ. ನೈಸರ್ಗಿಕ ಕೃಷಿ ಪದ್ಧತಿಯಿಂದ ರೈತರು ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯ ಪಡೆಯಬಹುದು


**–ಹನುಮಂತಪ್ಪ ವಾಲಿಕಾರ್ ರೈತ**

## ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ ಮಾನ್ವಿ ತಾಲೂಕ ಘಟಕಕ್ಕೆ ಉಪಾಧ್ಯಕ್ಷರಾಗಿ ರಂಗಪ್ಪ ನಾಯಕ ಉಮಳಿ ಹೊಸೂರು ನಾಯಕ ಆಯ್ಕೆ.

ನೈಜ್ಯ ದೇಸೆ ನ್ಯೂಸ್

**ಮಾನ್ವಿ: ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ (ರಿ) ರಾಯಚೂರು ಬಿ. ರಾಮಣ್ಣ ನಾಯಕ ಜಿಲ್ಲಾಧ್ಯಕ್ಷರು, ತಾಲೂಕಾಧ್ಯಕ್ಷರಾದ ದೇವರಾಜ ನಾಯಕ ಹಾಗೂ ಪ್ರಧಾನ ಕಾರ್ಯದರ್ಶಿಯಾದ ಕೊಂಡಯ್ಯ ನಾಯಕರವರ ಆದೇಶದ ಮೇರೆಗೆ ಮಾನವಿ ತಾಲೂಕ ಘಟಕಕ್ಕೆ ತಾಲೂಕ ಉಪಾಧ್ಯಕ್ಷರಾಗಿ ರಂಗಪ್ಪ ನಾಯಕ ಉಮಳಿ ಹೊಸೂರು ಇವರನ್ನು ನೇಮಕ ಮಾಡಿದ್ದು.**

ಕೂಡಲೇ ಸಂಘದ ಎಲ್ಲಾ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಶೈಕ್ಷಣಿಕ, ಆರ್ಥಿಕ, ಹಾಗೂ ಸಂಘಟನೆಯ ಬಲವರ್ಧನೆಗಾಗಿ ಶ್ರಮಿಸಲು ಈ ಮೂಲಕ



ತಮಗೆ ಸೂಚಿಸಿ ಆದೇಶಿಸಿದೆ.ನಂತರ ತಾಲೂಕ ಉಪಾಧ್ಯಕ್ಷರಾಗಿ ಆಯ್ಕೆಯಾದ ರಂಗಪ್ಪ ನಾಯಕಗೆ ಅವರ ಅಭಿಮಾನಿ ಬಳಗ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ, ನಾಯ್ಡು ನಾಯಕ, ವಿನೋದ ಕುಮಾರ, ಕೆ.ಸಾಜೀದ ಪಾಷ, ರಮೇಶ ನಾಯಕ,ಈರಪ್ಪ ನಾಯಕ, ದೇವು,ಅಂಬಣ್ಣ ನಾಯಕ ಬೆವನೂರು ನಾಯಕ, ಲಚಮಯ್ಯ ನಾಯಕ ,ಅಯ್ಯನಗೌಡ, ರಹಿಮಾನ್,– ಅಂಬಣ್ಣ ನಾಯಕ, ಪ್ರದೀಪ್ ನಾಯಕ, ಇತರರರು ಉಪಸ್ಥಿತರಿದ್ದರು.

## ತೋರಣದಿನ್ನಿ ಗ್ರಾಮ ಪಂಚಾಯತಿಗೆ ಉದ್ಯೋಗ ಖಾತ್ರಿ ಕೆಲಸಕ್ಕಾಗಿ ಮಹಿಳೆಯರು ಮುತ್ತಿಗೆ

ನೈಜ್ಯ ದೇಸೆ ನ್ಯೂಸ್

**ಹಾಲಾಪೂರ: ಸಮೀಪದ ತೋರಣದಿನ್ನಿ ಗ್ರಾಮ ಪಂಚಾಯಿತಿಗೆ ಗೂಗೇಬಾಳ ಗ್ರಾಮದ ಮಹಿಳೆಯರು ಉದ್ಯೋಗ ಖಾತ್ರಿ ಕೆಲಸಕ್ಕಾಗಿ ಪಂಚಾಯಿತಿಗೆ ಮುತ್ತಿಗೆ ಹಾಕಿ ಇಲ್ಲಿನ ಗ್ರಾಮ ಪಂಚಾಯತಿ ಪಿಡಿಒ ತಿಮ್ಮಪ್ಪ ಮತ್ತು ಆಡಳಿತ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.**

ಗೂಗೆಬಾಳ ಗ್ರಾಮದ ಗೌರಮ್ಮ ಗಂಡ ಹನುಮಂತ ಎನ್ನುವವರು ನಾವು ಕಳೆದ ನಾಲ್ಕು ತಿಂಗಳಗಳಿಂದ ಕೆಲಸವಿಲ್ಲದೆ, ಖಾಲಿ ಕುಳಿತಿದ್ದು ಅದಕ್ಕಾಗಿ ತೋರಣದಿನ್ನಿ ಗ್ರಾಮ ಪಂಚಾಯತಿ ಪಿಡಿಒ ತಿಮ್ಮಪ್ಪ ಮತ್ತು ಅನೇಕರಿಗೆ ಹಲವು ಸಲ ಉದ್ಯೋಗ ಖಾತ್ರಿ ಕೆಲಸ ಕೊಡಲು ಮನವಿ ಮಾಡಿದರು ಕಿಂಚಿತ್ತೂ ಮನ್ನಣೆ ನೀಡದೆ ಇಲ್ಲದ ನೆಪ ಹೇಳುತ್ತಾ ಸಮಯ ಕಳೆದಿದ್ದು ಕೆಲಸ ಕೊಡದೆ ನಿರ್ಲಕ್ಷ್ಯ ಕಾಣುತ್ತಿದ್ದಾರೆ, ಇಲ್ಲಿಯ ಆಡಳಿತ ಅಧಿಕಾ–



ರಿಗಳು ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತೆ ತೋರಣದಿನ್ನಿ ಗ್ರಾಮ ಪಂಚಾಯಿತಿ ಕಥ–'ಯಾಗಿದೆ ಎಂದು ಗೌರಮ್ಮ ಗಂಡ ಹನುಮಂತ ಎನ್ನುವರು ಹೇಳಿದರು, ಈಗಲಾದರೂ ತಾಲೂಕು ಪಂಚಾಯತಿ ಇಒ ರವರು ತಕ್ಷಣ ಪಿಡಿಓ ರವರಿಗೆ ಕೆಲಸ ಕೊಡಲು ಸೂಚಿಸಬೇಕು ಇಲ್ಲವಾದರೆ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಅನೇಕರು ಹೇಳಿದರು, ಈ ವೇಳೆಯಲ್ಲಿ ಎಲ್ಲಮ್ಮ ಗಂಡ ಸಿದ್ದಪ್ಪ, ಅಂಬಮ್ಮ ಗಂಡ ಶಿವಪ್ಪ, ಹನುಮಂತಿ ಗಂಡ ಕರಿಯಪ್ಪ, ಮಹಾಂತೇಶ ಹಿರೇಮಠ, ಮೌನೇಶ ತೋರಣದಿನ್ನಿ ಇನ್ನಿತರರು ಇದ್ದರು.

# ಕಠಿಣ ಪರಿಶ್ರಮದಿಂದ ಶ್ರೇಷ್ಠಸಾಧನೆ ಸಾಧ್ಯ: ಶಿಕ್ಷಕ ಬಸವರಾಜ

ನೈಜ್ಯ ದೇಸೆ ನ್ಯೂಸ್

**ತಾಳಿಕೋಟಿ: ನಿಮಗೆ ಒಳ್ಳೆಯ ಶಿಕ್ಷಣ ನೀಡಿ ನಿಮ್ಮ ಭವಿಷ್ಯ ಉಜ್ವಲಗೊಳಿಸಲು ಹೆತ್ತವರು ಹಗಲಿರಳು ಕಷ್ಟ ಪಡುತ್ತಾರೆ ಅವರ ನಿರೀಕ್ಷೆ ಹುಸಿಗೊಳಿಸಬೇಡಿ, ಕಠಿಣ ಪರಿಶ್ರಮದಿಂದ ಒಳ್ಳೆಯ ಸಾಧನೆ ಮಾಡುವಂಥವರಾಗಿ ಎಂದು ಮಡಿಕೇಶ್ವರ ಸರ್ಕಾರಿ ಪ್ರೌಢಶಾಲೆ ಸಹಶಿಕ್ಷಕ ಬಸವರಾಜ ಹಂಚಲಿ ಹೇಳಿದರು. ತಾಲೂಕಿನ ಬಿಳೇಭಾವಿ ಗ್ರಾಮದ ಶ್ರೀ ಭಾಗ್ಯವಂತಿ ಹಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಶನಿವಾರ ಮಾತನಾಡಿದರು.**

ಹೆತ್ತವರು ಮಕ್ಕಳನ್ನು ಹೀಯಾಳಿಸದೆ ಪ್ರೋತ್ಸಾಹಿಸುವ ಕಾರ್ಯ ಮಾಡಬೇಕು. ಮಕ್ಕಳಿಗೆ ತಂದೆ ತಾಯಿಗಳು ಮಾದರಿಯಾಗಬೇಕು ಅವರನ್ನು ಕೇವಲ ಅಂಕಗಳಿಕೆಗಾಗಿ ಸಿದ್ಧಪಡಿಸದೆ




ಒಳ್ಳೆಯ ವ್ಯಕ್ತಿಯನ್ನಾಗಿ ನಿರ್ಮಾಣ ಮಾಡಲು ಪ್ರಯತ್ನಿಸಬೇಕು. ಈ ಶಿಕ್ಷಣ ಸಂಸ್ಥೆಯಲ್ಲಿ ಶಿಕ್ಷಣದೊಂದಿಗೆ ಸಂಸ್ಕಾರಗಳನ್ನು ಕಲಿಸಿ ಕೊಡುವ ಕಾರ್ಯ ಆಗುತ್ತಿರುವುದು ಶ್ಲಾಘನೀಯ, ನಿಮ್ಮೆಲ್ಲರ ಸಹಕಾರ ಇವರಿಗೆ ಇರಲಿ ಎಂದರು. ಕೆಪಿಸಿಸಿ ರಾಜ್ಯ ಪ್ರಧಾನ ಕಾರ್ಯದರ್ಶಿ, ನೇತ್ರ ತಜ್ಞ ಡಾ.ಪ್ರಭುಗೌಡ ಲಿಂಗದಳ್ಳಿ ಮಾತನಾಡಿ ಶಿಕ್ಷಣ ಸಮುದಾಯದ ಭವಿಷ್ಯವನ್ನು ನಿರ್ಣಯಿಸುತ್ತದೆ ಅದರ ಕುರಿತು ನಿರ್ಲಕ್ಷ ಬೇಡ, ಗುಣಮಟ್ಟದ ಶಿಕ್ಷಣದೊಂದಿಗೆ ಒಳ್ಳೆಯ ಸಂಸ್ಕಾರಗಳನ್ನೂ ಕಲಿಸಿಕೊಡುವ ಕಾರ್ಯ ಆಗಬೇಕಾಗಿದೆ. ಕೇವಲ ಐದು ವರ್ಷಗಳ ಅವಧಿಯಲ್ಲಿ ಈ ಸಂಸ್ಥೆ ಗಮನಾರ್ಹವಾದ ಸಾಧನೆ ಮಾಡಿದೆ ಇದರ ಆಡಳಿತ ಮಂಡಳಿ ಹಾಗೂ ಶಿಕ್ಷಕರಿಗೆ ಅಭಿನಂದಿಸುತ್ತೇನೆ ಎಂದರು.

ಜಿ.ಪಂ.ಮಾಜಿ ಸದಸ್ಯ ಬಸನಗೌಡ ವಣಕಿಹಾಳ,ಯುವ ಮುಖಂಡ ಸಂಗನಗೌಡ ಪಾಟೀಲ (ಸಾಸನೂರ) ಮಾತನಾಡಿದರು. ಸಮಾರಂಭದ ಸಾನಿಧ್ಯ ವಹಿಸಿದ್ದ ಸಾಸನೂರ ಗುರುಕುಲದ ಪೀಠಾಧಿಪತಿ ಪೂಜ್ಯ ಅಟವಿ ಶಿವಲಿಂಗ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಷ.ಬ್ರ. ಮಹಾಂತಲಿಂಗ ಶಿವಾಚಾರ್ಯರು ಸಮ್ಮುಖ ವಹಿಸಿದ್ದರು. ಮಲ್ಲಣ್ಣ ಗು.ಅಸ್ಕಿ ಅಧ್ಯಕ್ಷತೆ ಹಾಗೂ ಸಂಸ್ಥೆಯ ಅಧ್ಯಕ್ಷ ಮಲ್ಲಣ್ಣ ಚಂ.ಪರಸನಳ್ಳಿ ನೇತೃತ್ವ ವಹಿಸಿದ್ದರು.ಜಿಪಂ ಮಾಜಿ ಸದಸ್ಯ ಎಚ್.ಸಿ. ಪೋಲಿಸ ಪಾಟೀಲ ಹಾಗೂ ಡಾ.ಬಿ.ಎಂ. ಅಳ್ಳಿಕೋಟಿ ಉದ್ಘಾಟಿಸಿದರು.ಇದೇ ಸಂದರ್ಭದಲ್ಲಿ ವಿವಿಧ ಕ್ರೀಡೆಯಲ್ಲಿ ಉತ್ತಮ ಸಾಧನೆ ತೋ–ರಿದ ಹಾಗೂ ನವೋದಯ, ಸೈನಿಕ ಶಾಲೆಗಳಿಗೆ ಆಯ್ಕೆಯಾದ 100 ಮಕ್ಕಳಿಗೆ ಗೌರವಿಸಲಾಯಿತು.

ವೇದಿಕೆ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಸಿದ್ರಾಮಯ್ಯ ಮಠ ಸ್ವಾಗತಿಸಿದರು.ಶಿಕ್ಷಕ ಮಹೆಮೂದ ಬಾಗಲಕೋಟ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಬಿ.ಟಿ.ವಜ್ಜಲ, ಕಾರ್ಯದರ್ಶಿ ಸಿದ್ದನಗೌಡ ಪರಸನಳ್ಳಿ, ಗುರಣ್ಣಗೌಡ ಗುರಡ್ಡಿ, ಸಾಹೇಬಗೌಡ ರಾರಡ್ಡಿ, ಸಿಆರ್ ಸಿ. ರಾಜು ಮೂರುಮಾನ, ಮಲ್ಲನಗೌಡ ಮಾಳಿ, ಸಂಗಮೇಶ ದೇಸಾಯಿ,ಸಾಹೇಬಗೌಡ ವಠಾರ,ಮು.ಗು.ವಿಷ್ಣು ನಾಯಕ, ಆಡಳಿತ ಮಂಡಳಿ ಸದಸ್ಯರು, ಶಿಕ್ಷಕ ವರ್ಗ, ಸಿಬ್ಬಂದಿ, ಪಾಲಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## ಸಾಹಿತ್ಯ ಸಿಂಚನ

ಮಾನಿನಿ ಸಂಜೀವಿನಿ.!

ಸೃಷ್ಟಿಯೂ ನೀನೆ ಸಮಷ್ಠಿಯು ನೀನೆ ನಾರಿ
ಭುವಿಗೂ ಬದುಕಿಗೂ ನೀನೇ ಬೆಳಕಿನ ದಾರಿ
ನಿನ್ನಿಂದಲೇ ಮಮತೆ ವಾತ್ಸಲ್ಯದ ಸವಿಝರಿ
ನೀನೇ ಪ್ರೀತಿ ಪ್ರೇಮ ಅನುರಾಗಗಳ ಲಹರಿ.!

ಕಾಂತಿಯೂ ನೀನೆ ಶಾಂತಿಯೂ ನೀನೆ ವನಿತೆ
ಅಂದು ಇಂದು ಎಂದಿಗೂ ನೀನೆ ಜಗಪ್ರಣತೆ
ನಿನ್ನಿಂದಲೇ ಬಂಧಾನುಬಂಧಗಳ ಭಾವದೊರತೆ
ನೀನೆ ಪ್ರತಿ ಮನೆಮನದ ಚಿರಚಿರಂತನ ಹಣತೆ.!

ನಿತ್ಯಾಧಾರವೂ ನೀನೆ ಆಶ್ರಯವೂ ನೀನೆ ಹೆಣ್ಣೆ
ಅಡಿಗಡಿಗೂ ಅಕ್ಕರಾಸ್ಥೆಯಲಿ ಕಾಯುತಿಹ ಕಣ್ಣೆ
ನಿನ್ನಿಂದಲೇ ಬಾಳದೀಪಕೆ ಚೈತನ್ಯದ ಬತ್ತಿ ಎಣ್ಣೆ
ನೀನೆ ಲೋಕ ಕಾಪಿಡುತಿರುವ ಕಾರುಣ್ಯ ಕರುಣೆ.!

ಸಮಸ್ತ ಚೆಲುವು ನೀನೆ ಸರ್ವ ಬಲವು ನೀನೆ ಸ್ತ್ರೀ
ಸಕಲ ಸಾಧನೆಗು ಶೋಧನೆಗೂ ನೀನೆ ಸತ್ಯಪ್ರಹರಿ
ನಿನ್ನಿಂದಲೇ ಯಶಸ್ಸು ಶ್ರೇಯಸ್ಸುಗಳಿಗೆ ಹೆದ್ದಾರಿ
ನೀನೆ ಗೆಲುವು ಒಲವು ನಲಿವಿಗೆ ನಿತ್ಯ ರಹದಾರಿ.!

ಸ್ಫೂರ್ತಿಯು ನೀನೆ ಕೀರ್ತಿಯು ನೀನೆ ಮಾನಿನಿ
ಪ್ರತಿ ಜೀವಭಾವಗಳಿಗೆ ಪ್ರೇರಣೆಯ ಗುಪ್ತಗಾಮಿನಿ
ನಿನ್ನಿಂದಲೇ ಬೆಳದಿಂಗಳ ತಂಬೆಳಕಿನ ಯಾಮಿನಿ
ನೀನೇ ಕನಸು ಕಲ್ಪನೆಗಳ ಪುಳಕಿಪ ಸೌದಾಮಿನಿ.!

ನುಡಿಸುವಳು ನೀನೆ ನಡೆಸುವಳು ನೀನೆ ಮಹಿಳೆ
ಯುಗಯುಗದಿ ಜಗಕೆ ನೀನೆ ಗಾರುಡಿಯ ಕಹಳೆ
ನಿನ್ನಿಂದಲೇ ಚಂದನದ ನಂದನವಾಗಿದೆ ಈ ಇಳೆ
ನೀನೇ ನಗೆ ನಲಿವುಗಳ ಅಕ್ಷಯವಾಗಿಸುವ ತರಳೆ.!

ವ್ಯಾಪ್ತಿಯೂ ನೀನೆ ದೀಪ್ತಿಯೂ ನೀನೆ ಲಲನೆ
ಅರಿವು ಪರಿವು ಹರಿವುಗಳಿಗೆಲ್ಲಕು ನೀನೆ ಚಾಲನೆ
ನಿನ್ನಿಂದಲೇ ಜೀವ ಜೀವನಗಳ ಲಾಲನೆ ಪಾಲನೆ
ನೀನೇ ತಪಸ್ಸು ತೇಜಸ್ಸು ವರ್ಚಸ್ಸಿಗೆ ಸಂಚಲನೆ.!

ಎ.ಎನ್.ರಮೇಶ್.ಗುಬ್ಬಿ.

# ಕಠಿಣ ಪರಿಶ್ರಮದಿಂದ ಉಜ್ವಲ ಭವಿಷ್ಯ ಕಟ್ಟಿಕೊಳ್ಳಿ: ಅಧ್ಯಕ್ಷ ರಾಮನಗೌಡ

ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ವಿದ್ಯಾರ್ಥಿಗಳು ಜೀವನದಲ್ಲಿ ಕಠಿಣ ಪರಿಶ್ರಮ ನಿರಂತರ ಅಧ್ಯಯನದ ಮೂಲಕ ಒಳ್ಳೆಯ ಭವಿಷ್ಯವನ್ನು ಕಟ್ಟಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ಸಂಸ್ಥೆಯ ಅಧ್ಯಕ್ಷ ರಾಮನಗೌಡ ಎಚ್.ಬಾಗೇವಾಡಿ ಹೇಳಿದರು. ಪಟ್ಟಣದ ವಿಕಾಸ್ ಪಬ್ಲಿಕ್ ಸ್ಕೂಲ್ ತಾಳಿಕೋಟಿಯಲ್ಲಿ ಎಸ್‌ಎಸ್–ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಆಯೋಜಿಸಲಾದ "ಬೀಳ್ಕೊಡುಗೆ" ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಶನಿವಾರ ಮಾತನಾಡಿದರು.

ವಿದ್ಯಾರ್ಥಿ ಜೀವನ ಬಹಳ ಅಮೂಲ್ಯವಾದದ್ದು ಅದನ್ನು ಯಾವ ಕಾರಣ–ಕ್ಕೂ ಕೆಡದಂತೆ ನೋಡಿಕೊಳ್ಳಿ ಎಂದು ಸಲಹೆ ನೀಡಿದರು. 9 ನೇ ತರಗತಿಯ ವಿದ್ಯಾರ್ಥಿಗಳು, ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಹಾರ್ದಿಕ




ಸ್ವಾಗತ ಕೋರಿದರು. ಕಾರ್ಯಕ್ರಮದ ನಿಮಿತ್ಯ ಶಾಲೆಯನ್ನು ಸುಂದರವಾಗಿ ಅಲಂಕರಿಸಲಾಗಿತ್ತು. ಕಾರ್ಯಕ್ರಮದಲ್ಲಿ ಹಾಡು, ನೃತ್ಯ, ಭಾಷಣಗಳು ಮತ್ತು ಹಲವು ಮನರಂಜನಾ ಕಾರ್ಯಕ್ರಮಗಳು ನಡೆದವು. ವಿದ್ಯಾರ್ಥಿಗಳು ಶಾಲೆಯಲ್ಲಿ ಕಳೆದ ತಮ್ಮ ಮಧುರ ನೆನಪುಗಳನ್ನು ಹಂಚಿಕೊಂಡು ಶಿಕ್ಷಕರು ನಮಗೆ ಮಾರ್ಗದರ್ಶನ ನೀಡಿದವರು ಮಾತ್ರವಲ್ಲ, ನಮ್ಮ ಜೀವನವನ್ನು ರೂಪಿಸಿದವರು ಕೂಡ. ಅವರು ನಮಗೆ ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡಲು ಪ್ರೇರಣೆ ನೀಡಿದರು.

ಅವರ ಆಶೀರ್ವಾದಗಳು ನಮಗೆ ಸದಾ ಮಾರ್ಗದರ್ಶಕವಾಗಿವೆ. ಶಾಲೆಯಲ್ಲಿ ಕಳೆದ ಸ್ನೇಹದ ಕ್ಷಣಗಳು, ಆಟಗಳು, ಪಾಠಗಳು ಮತ್ತು ಶಿಕ್ಷಕರ ಪ್ರೀತಿ ಎಂದಿಗೂ ಮರೆಯಲಾಗದು ಎಂದು ತಿಳಿಸಿದರು. "ಬೀಳ್ಕೊಡುಗೆ" ದಿನದಲ್ಲಿ ಸ್ನೇಹಿತರನ್ನು ಮತ್ತು ಶಿಕ್ಷಕರನ್ನು ಬಿಡುವಾಗ ಎಲ್ಲರ ಕಣ್ಣುಗಳಲ್ಲಿ ಸಂತೋಷದ ಜೊತೆ ಸ್ವಲ್ಪ ಕಣ್ಣೀರು ಕೂಡ ಕಾಣಿಸಿತು. ಕಾರ್ಯಕ್ರಮದಲ್ಲಿ ಪ್ರಾಚಾರ್ಯರಾದ ಶ್ರದ್ಧಾನಂದ, ಶಿಕ್ಷಕ ವರ್ಗ ಹಾಗೂ ವಿದ್ಯಾರ್ಥಿ ಇದ್ದರು.

# ಅದ್ದೂರಿಯಾಗಿ ಜರುಗಿದ ಕೆ.ಹೊಸಹಳ್ಳಿ ಶ್ರೀ ಶರಣಬಸವೇಶ್ವರ ಜಾತ್ರಾ ಮಹೋತ್ಸವ



ನೈಜ್ಯ ದೆಸೆ ನ್ಯೂಸ್

ಸಿಂಧನೂರು: ತಾಲೂಕಿನ ಕೆ. ಹೊಸಹಳ್ಳಿ ಗ್ರಾಮದ ಶ್ರೀ ಶರಣಬಸವೇಶ್ವರ ದೇವರ 35ನೇ ವರ್ಷದ ಜಾತ್ರಾ ಮಹೋತ್ಸವ ಹಾಗೂ 101 ಕುಂಭೋತ್ಸವ ಕಾರ್ಯಕ್ರಮ ಅತ್ಯಂತ ಭಕ್ತಿಭಾವ ಹಾಗೂ ಸಂಭ್ರಮದ ವಾತಾವರಣದಲ್ಲಿ ಅದ್ದೂ–ರಿಯಾಗಿ ನೆರವೇರಿತು. ಜಾತ್ರೆಯ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ವಿಶೇಷ ಪೂಜೆಗಳು ಹಾಗೂ ಭಕ್ತರಿಗಾಗಿ ದೈವದರ್ಶನ



ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಲಾಗಿತ್ತು.

ಜಾತ್ರಾ ಮಹೋತ್ಸವದ ನಿಮಿತ್ತ ದೇವಾಲಯವನ್ನು ಆಕರ್ಷಕವಾಗಿ ಅಲಂಕ–ರಿಸಲಾಗಿದ್ದು, ಗ್ರಾಮದೆಲ್ಲೆಡೆ ಹಬ್ಬದ ವಾತಾವರಣ ಮೂಡಿತ್ತು. ಬೆಳಿಗ್ಗೆಯಿಂದಲೇ ಭಕ್ತರು ದೇವಾಲಯಕ್ಕೆ ಆಗಮಿಸಿ ಪೂಜೆ ಸಲ್ಲಿಸಿ ದೇವರ ಕೃಪೆಗೆ ಪಾತ್ರರಾದರು. ಜಾತ್ರೆಯ ವಿಶೇಷವಾಗಿ 101 ಕುಂಭೋತ್ಸವ ಕಾರ್ಯಕ್ರಮ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು. ಈ ಸಂದರ್ಭದಲ್ಲಿ ಭಕ್ತಾದಿಗಳಿಗೆ ನಿರಂತರವಾಗಿ ಅನ್ನಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದ್ದು, ದೂರದೂರಿನಿಂದ ಆಗಮಿಸಿದ ಭಕ್ತರು ಪ್ರಸಾದ ಸ್ವೀಕರಿಸಿ ಸಂತೋಷಪಟ್ಟರು. ಈ ಕಾರ್ಯಕ್ರಮದಲ್ಲಿ ಕೆ. ಹೊಸಹಳ್ಳಿ ಶ್ರೀ ಶರಣಬಸವೇಶ್ವರ ಸೇವಾ ಸಮಿತಿ ಸದಸ್ಯರು, ಯುವಕ ಮಂಡಳಿ ಸದಸ್ಯರು, ಹಳೆಯ ವಿದ್ಯಾರ್ಥಿಗಳು, ಗ್ರಾಮ ಪಂಚಾಯಿತಿ ಸದಸ್ಯರು, ಊರಿನ ಹಿರಿಯರು, ಯುವಕರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಗ್ರಾಮದ ಸಾರ್ವಜನಿಕರು ಸಹಕಾರ ನೀಡಿದ್ದು, ಜಾತ್ರಾ ಮಹೋತ್ಸವವು ಅತ್ಯಂತ ಶ್ರದ್ಧಾ ಭಕ್ತಿಯಿಂದ ಮತ್ತು ಉತ್ಸಾಹದಿಂದ ನೆರವೇರಿತು.

## ಯುದ್ಧಗಳಿಂದ ಮಾನವೀಯತೆ ಕಣ್ಮರೆ: ಲಾಲಹುಸೇನ್

ನೈಜ್ಯ ದೆಸೆ ನ್ಯೂಸ್

ಯುದ್ಧಗಳು ಮನುಷ್ಯನನ್ನು ಕ್ರೂರವಾಗಿ ನೆಡೆಸಿಕೊಳ್ಳುತ್ತಿದ್ದು ಮಾನುಷ್ಯತ್ವ ಕಾಣೆಯಾಗಿದೆ' ಎಂದು ಲಾಲ್‌ಹುಸೇನ್ ಕಂದಗಲ ಹೇಳಿದರು. ಜಮಾಅತೆ ಇಸ್ಲಾಮಿ ಹಿಂದ್ ಹನುಮಸಾಗರ ಘಟಕದ ವತಿಯಿಂದ ಮದೀನಾ ಜಾಮಿಯಾ ಮಜೀದ್‌ನಲ್ಲಿ ಶನಿವಾರ ಇಫ್ತಾರ್ ಸೌಹಾರ್ದ ಕೂಟ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.ಸಮಾಜದಲ್ಲಿ ಬಾಂಧವ್ಯ ಮತ್ತು ಶಾಂತಿ ಕಾಪಾಡುವುದು ಎಲ್ಲರ ಕರ್ತವ್ಯ. ಇಂತಹ ಸೌಹಾರ್ದ ಕೂಟಗಳು ಸಹನಶೀಲತೆ ಮತ್ತು ಪರಸ್ಪರ ಗೌರವವನ್ನು ಉಂಟುಮಾಡಲು ಮಹತ್ವದ್ದಾಗಿದೆ ಎಂದು ಅಭಿಪ್ರಾಯಪಟ್ಟರು.




'ರಂಜಾನ್ ಉಪವಾಸವು ಶಿಷ್ಟಾಚಾರ ಮತ್ತು ಸಹಾನುಭೂತಿಯ ಸಂಕೇತವಾಗಿದೆ. ಹಸಿವಿನ ಅನುಭವದ ಮೂಲಕ ಬಡವರ ಸಂಕಟವನ್ನು ಅರಿಯಲು ಇದು ಒಂದು ಅಮೂಲ್ಯ ಅವಕಾಶ' ಎಂದು ವಿವರಿಸಿದರು. 'ಒಬ್ಬನೇ ದೇವರು ಎಂಬ ಸತ್ಯ ಮಾನವನಿಗೆ ಏಕತೆ ಮತ್ತು ಶರಣಾಗತಿಯ ಪಾಠ ಕಲಿಸುತ್ತದೆ. ಮಾನವನ ಸಮಾನತೆ ಎಲ್ಲರೂ ಸಮಾನರು ಎಂಬ ಭಾವನೆ ಮೂಡಿಸಿ ಭೇದಭಾವವಿಲ್ಲದ ಸಮಾಜ ನಿರ್ಮಾಣ–ಕ್ಕೆ ಉತ್ತೇಜನ ನೀಡುತ್ತದೆ. ಮನುಷ್ಯನು ಜ್ಞಾನ, ನೈತಿಕತೆ ಮತ್ತು ಕರ್ತವ್ಯಬೋಧೆಯಿಂದ ಇತರ ಜೀವಿಗಳಿಗಿಂತ ಶ್ರೇಷ್ಠನಾಗಿದ್ದರೂ, ಅವನು ಪ್ರಕೃತಿಯ ಭಾಗವೆಂಬ ಅಳವಡಿಕೆಯನ್ನು ಮರೆಯಬಾರದು' ಎಂದರು. ನಾಗನಗೌಡ ಪೊಲೀಸ್‌ಪಾಟೀಲ ಮಾತನಾಡಿ, 'ಧರ್ಮಗಳ ಮೂಲ ಉದ್ದೇಶ ಮಾನವ ಸೇವೆ. ಈ ರೀತಿಯ ಸಮಾವೇಶಗಳು ವಿವಿಧ ಧರ್ಮೀಯರ ನಡುವಿನ ಅಂತರವನ್ನು ಕಡಿಮೆಗೊಳಿಸಿ, ಸಹಭಾವನೆ ಮೂಡಿಸುತ್ತದೆ' ಎಂದರು. ಕಾರ್ಯಕ್ರಮದಲ್ಲಿ ನಜೀರ್ ಸಾಬ್ ಮೇನೆದಾಳ, ನಾರಾಯಣಪ್ಪ ನಾಗೋರ್, ಚಂದ್ರು ಹಿರೇಮನಿ, ಪ್ರಶಾಂತ ಗಡಾದ, ವಿಶ್ವನಾಥ ನಾಗೋರ್, ರಾಜೆಸಾಬ್ ಕುಷ್ಟಗಿ, ಸೂಚಪ್ಪ ದೇವರಮನಿ, ಮಂಜುನಾಥ ಹುಲ್ಲೂರು, ಗೇಸುದರಾಜ್ ಮೂಲಿಮನಿ, ಅಬ್ದುಲ್ ರಜಾಕ್, ಮೆಹಬೂಬ್ ಮೆನೆದಾಳ, ಖಾಜಾ ಹುಸೇನ್ ಹುಲಿಹೈದರ, ರಜಾಕ್ ಚಳಗೇರಿ, ಖಲೀಲ್ ಅಹ್ಮದ್ ಚೌಧರಿ ಸೇರಿದಂತೆ ಗಣ್ಯರು ಪಾಲ್ಗೊಂಡಿದ್ದರು.

# ಪವಿತ್ರ ಕುಟುಂಬ ದೇವಾಲಯದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಅಂತಾರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ನಗರದ ಪವಿತ್ರ ಕುಟುಂಬ ದೇವಾಲಯದಲ್ಲಿ (Holy Family Church) ಭಾನುವಾರ ಅತ್ಯಂತ ಭಕ್ತಿಪೂರ್ವಕವಾಗಿ ಹಾಗೂ ಸಡಗರದಿಂದ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಕಾರ್ಯಕ್ರಮವು ಪವಿತ್ರ ಪೂಜಾ ವಿಧಿಯೊಂದಿಗೆ ಆರಂಭವಾಯಿತು.

ಮಹಿಳೆಯರ ಶ್ರೇಯೋಭಿವೃದ್ಧಿ ಮತ್ತು ಸಮಾಜದಲ್ಲಿ ಅವರ ಉನ್ನತ ಸ್ಥಾನಕ್ಕಾಗಿ ವಿಶೇಷ ಪ್ರಾರ್ಥನೆಗಳನ್ನು ಸಲ್ಲಿಸಲಾಯಿತು.ಸಮಾಜ ಮತ್ತು ಕುಟುಂಬದ ನಿರ್ಮಾಣದಲ್ಲಿ ಮಹಿಳೆಯರ ಸೇವೆ,



ತ್ಯಾಗ ಹಾಗೂ ಅವರ ಮಹತ್ವದ ಪಾತ್ರವನ್ನು ಈ ಸಂದರ್ಭದಲ್ಲಿ ಸ್ಮರಿಸಲಾಯಿತು,ಪವಿತ್ರ ಪೂಜೆಯ ನಂತರ, ಮಹಿಳೆಯರ ಗೌರವಾರ್ಥ–ವಾಗಿ ಚರ್ಚ್ ಆವರಣದಲ್ಲಿ ಕೇಕ್ ಕತ್ತರಿಸುವ ಮೂಲಕ ಸಂಭ್ರಮವನ್ನು ಹಂಚಿಕೊಳ್ಳಲಾಯಿತು.ಈ ಸಂದರ್ಭದಲ್ಲಿ ದೇವಾಲಯದ ಧರ್ಮಗುರುಗಳಾದ ಫಾ. ಜ್ಞಾನಪ್ರಕಾಶಂ, ವಿವಿಧ ಕನ್ಯಾಸ್ತ್ರಿಯರು ಹಾಗೂ ಧರ್ಮಸಭೆಯ ಪ್ರಮುಖ ಸದಸ್ಯರು ಭಾಗವಹಿಸಿ ಮಹಿಳೆಯರಿಗೆ ಶುಭಾಶಯಗಳನ್ನು ಕೋ–ರಿದರು. ಸ್ತ್ರೀಯರು ಸಮಾಜದ ಕಣ್ಣುಗಳಾಗಿದ್ದು, ಅವರ ಪ್ರಗತಿಯೇ ದೇಶದ ಪ್ರಗತಿ ಎಂದು ಗಣ್ಯರು ಅಭಿಪ್ರಾಯಪಟ್ಟರು.ಈ ಆಚರಣೆಯಲ್ಲಿ ಪವಿತ್ರ ಕುಟುಂಬ ದೇವಾಲಯದ ವ್ಯಾಪ್ತಿಯ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಇಡೀ ಕಾರ್ಯಕ್ರಮವು ಅತ್ಯಂತ ಸಂತೋಷ ಮತ್ತು ಭಕ್ತಿಪೂರ್ವಕ ವಾತಾವರಣದಲ್ಲಿ ಜರುಗಿತು.

# ಮಾಗಡಿ ತಹಶೀಲ್ದಾರ್ ಮೇಲೆ ಹಲ್ಲೆಗೆ ಅರ್ಚಕರ ಯತ್ನ



ನೈಜ್ಯ ದೆಸೆ ನ್ಯೂಸ್

ಮಾಗಡಿ: ಮುಜರಾಯಿ ಇಲಾಖೆಗೆ ಸೇರಿದ ತಾಲ್ಲೂಕಿನ ಹರ್ತಿ ಗ್ರಾಮದ ಹರ್ತಿ ಮಾರಮ್ಮ ದೇವಾಲಯದ ಅರ್ಚಕರ ವ್ಯಾಜ್ಯದ ವಿಚಾರಣೆ ನಡೆಸುತ್ತಿದ್ದ ತಹಶೀಲ್ದಾರ್ ಶರತ್ ಕುಮಾರ್ ಮೇಲೆ ಅರ್ಚಕರು ಹಲ್ಲೆಗೆ ಯತ್ನಿಸಿದ್ದಾರೆ. ಅರ್ಚಕರಾದ ಸಿದ್ದೇಶ್ ಮತ್ತು ಹೊನ್ನರಾಜು ವಿರುದ್ಧ ವಿರುದ್ಧ ಮಾಗಡಿ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಾಗಿದೆ.

ದೇವಸ್ಥಾನದ ಜಾಗದ ವಿಷಯಕ್ಕೆ ಸಂಬಂಧಿಸಿದಂತೆ ಮಾಗಡಿ ತಾಲ್ಲೂಕು ಕಚೇ–ರಿಯ ಕೋರ್ಟ್ ಸಭಾಂಗಣದಲ್ಲಿ ತಹಶೀಲ್ದಾರ್ ವಿಚಾರಣೆ ನಡೆಸುತ್ತಿದ್ದರು. ಆಗ ಆರೋಪಿಗಳು ಹಾಗೂ ಸಂಗಡಿಗರು ತಹಶೀಲ್ದಾರ್ ಜೊತೆ ಏರುಧ್ವನಿಯಲ್ಲಿ ಮಾತಿನ ಚಕಮಕಿ ನಡೆಸಿದರು. ಅಕ್ಕಪಕ್ಕದವರು ಬಿಡಿಸಲು ಮುಂದಾದರೂ ಅವರನ್ನು ತಳ್ಳಿ ತಹಶೀಲ್ದಾರ್ ಮೇಲೆ ಹಲ್ಲೆಗೆ ಯತ್ನಿಸಿದ್ದಾರೆ. ಪರಿಸ್ಥಿತಿ ವಿಕೋಪಕ್ಕೆ ಹೋಗುವುದನ್ನು ಅರಿತ ತಹಶೀಲ್ದಾರ್ ಕೂಡಲೇ ಠಾಣೆಗೆ ಕರೆ ಮಾಡಿ ವಿಷಯ ತಿಳಿಸಿದರು. ಸ್ಥಳಕ್ಕೆ ಬಂದ ಪೊಲೀಸರು ಪರಿಸ್ಥಿತಿ ನಿಭಾಯಿಸಿದರು. ನಂತರ ತಹಶೀಲ್ದಾರ್ ನೀಡಿದ ದೂರಿನ ಮೇರೆಗೆ ಸಿದ್ದೇಶ್ ಮತ್ತು ಹೊನ್ನರಾಜು ವಿರುದ್ಧ ಪ್ರಕರಣ ದಾಖಲಿಸಿಕೊಂಡರು.

ಬಂಧನಕ್ಕೆ ಆಗ್ರಹ: ತಹಶೀಲ್ದಾರ್ ಶರತ್ ಕುಮಾರ್ ವಿರುದ್ಧ ಹಲ್ಲೆ ಯತ್ನ ಖಂಡಿಸಿ, ಸರ್ಕಾರಿ ನೌಕರರ ಸಂಘ ಮತ್ತು ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖೆಯ ಬೆಂಗಳೂರು ದಕ್ಷಿಣ ಜಿಲ್ಲಾ ಘಟಕದ ಸದಸ್ಯರು ರಾಮನಗರದ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು. ಕರ್ತವ್ಯದ ಸಂದರ್ಭದಲ್ಲಿ ಅಧಿಕಾರಿಗಳಿಗೆ ಸೂಕ್ತ ರಕ್ಷಣೆ ಒದಗಿಸಬೇಕು ಎಂದು ಆಗ್ರಹಿಸಿದರು. ಶರತ್ ಕುಮಾರ್ ಅವರನ್ನು ನಿಂದಿಸಿ ಹಲ್ಲೆಗೆ ಯತ್ನಿಸಿರುವವರನ್ನು ಪೊಲೀಸರು ಕೂಡಲೇ ಬಂಧಿಸಬೇಕು. ಕರ್ತವ್ಯ ನಿರತ ಅಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ದುರ್ವತ್ರನೆ ತೋರುವವರ ವಿರುದ್ಧ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ನಂತರ, ಹೆಚ್ಚುವರಿ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ಅವರಿಗೆ ಮನವಿ ಸಲ್ಲಿಸಿದರು. ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಕೆ. ಸತೀಶ್, ಕರ್ನಾಟಕ ರಾಜ್ಯ ಸರ್ಕಾರಿ ಕಂದಾಯ ಇಲಾಖೆ ನೌಕರರ ಸಂಘದ ಜಿಲ್ಲಾಧ್ಯಕ್ಷ ಹರ್ಷ ಎಂ., ಗೌರವಾಧ್ಯಕ್ಷ ಎ.ಎಸ್. ಧರೇಶ್ ಗೌಡ, ಪ್ರಧಾನ ಕಾರ್ಯದರ್ಶಿ ಯುವರಾಜ್ ಎ.ಪಿ., ಖಜಾಂಚಿ ತಂಗರಾಜ್, ಇನ್ನು ಮುಂತಾದವರು ಇದ್ದರು.

# ಮಸ್ಕಿಯಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ, ಆರೋಗ್ಯ ತಪಾಸಣಾ ಶಿಬಿರ

ನೈಜ್ಯ ದೆಸೆ ನ್ಯೂಸ್

ಮಸ್ಕಿ: ಮಹಿಳೆಯರ ಸಾಧನೆ ಸಮಾಜದ ಅಭಿವೃದ್ಧಿಗೆ ಬಲವಾದನೆಲೆಯಾಗಿದೆಎಂದು ಖಾದಿಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷ ಹಾಗೂ ಶಾಸಕ ಆರ್.ಬಸನಗೌಡ ತುರವಿಹಾಳ ಅಭಿಪ್ರಯಾ ವ್ಯಕ್ತಪಡಿಸಿದರು.

ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲೂಕಾಡಳಿತ, ತಾಲೂಕು ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿ ವರ್ಷದ ಮಾರ್ಚ್ 8 ರಂದು ವಿಶ್ವದಾದ್ಯಂತ ಮಹಿಳಾ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ನೀಡುತ್ತಿರುವ ಅಮೂಲ್ಯ ಕೊಡುಗೆಯನ್ನು ಸ್ಮ–ರಿಸುವ ದಿನವೇ ಮಹಿಳಾ ದಿನಾಚರಣೆ.

ಹಿಂದೆ ಮಹಿಳೆಯರು ಮನೆಗೆ ಮಾತ್ರ ಸೀಮಿತರಾಗಿದ್ದರೆ, ಇಂದು ಶಿಕ್ಷಣ, ರಾಜ–ಕೀಯ, ವಿಜ್ಞಾನ, ಕ್ರೀಡೆ, ಉದ್ಯಮ, ಆಡಳಿತ



ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ–್ಯವನ್ನು ಸಾಬೀತುಪಡಿಸಿ ದೇಶದ ಪ್ರಗತಿಗೆ ಪ್ರಮುಖ ಪಾತ್ರವಹಿಸುತ್ತಿದ್ದಾರೆಂದು ಹೇಳಿದರು. ಸರ್ಕಾರ ಮಹಿಳೆಯರ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ಜಾರಿಗೆ ತಂದಿದೆ. ಸ್ವಸಹಾಯ ಸಂಘಗಳು, ಉದ್ಯೋಗಾವಕಾಶಗಳು, ಶಿಕ್ಷಣ ಹಾಗೂ ಆರೋಗ್ಯದ ಕ್ಷೇತ್ರಗಳಲ್ಲಿ ಮಹಿಳೆಯ–ರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಇದರ ಪರಿಣಾಮವಾಗಿ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಮಹಿಳೆಯರ ಸ್ವಾವಲಂಬನೆ ಹೆಚ್ಚುತ್ತಿದೆ. ಮಹಿಳೆಯರಿಗೆ ಶಕ್ತಿ ತುಂಬಲು ರಾಜ್ಯ ಸರ್ಕಾರ 5 ಗ್ಯಾರಂಟಿಳಲ್ಲಿ ವಿಶೇಷವಾಗಿ 4 ಗ್ಯಾರಂಟಿ ಯೋಜನೆಗಳನ್ನು ಮಹಿಳೆಯರಿಗಾಗಿ ಜಾರಿಗೊಳಿಸಿದೆ ಎಂದರು.

ಇನ್ನೂ ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಸವಾಲುಗಳು ಸಂಪೂರ್ಣವಾಗಿ



ನಿವಾರಣೆಯಾಗಿಲ್ಲ. ಲಿಂಗ ಸಮಾನತೆ, ಸುರಕ್ಷತೆ, ಉದ್ಯೋಗದಲ್ಲಿ ಸಮಾನ ಅವಕಾಶಗಳು ಹಾಗೂ ಆರ್ಥಿಕ ಸ್ವಾವಲಂಬನೆ ಇನ್ನೂ ಪ್ರಮುಖ ಚರ್ಚೆಯ ವಿಷಯಗಳಾಗಿವೆ. ಮಹಿಳೆಯರ ಗೌರವ ಮತ್ತು ಹಕ್ಕುಗಳನ್ನು ಕಾಪಾಡುವಲ್ಲಿ ಸಮಾಜದ ಪ್ರತಿಯೊಬ್ಬರ ಪಾತ್ರ ಮುಖ್ಯವಾಗಿದೆ ಎಂದರು. ಪ್ರಸ್ತಾವಿಕವಾಗಿ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅಮರೇಶ ಯಾದವ ಮಾತನಾಡಿ ಮಹಿಳೆಯರನ್ನು ಗೌರವಿಸುವುದೇ ನಿಜವಾದ ಮಹಿಳಾ ದಿನಾಚರಣೆಯ ಅರ್ಥವಾಗಿದೆ. ಮಹಿಳೆಯರು ಕುಟುಂಬದ ಬೆನ್ನೆಲುಬಾಗಿದ್ದು, ಮಕ್ಕಳ ಶಿಕ್ಷಣದಿಂದ ಹಿಡಿದು ಕುಟುಂಬದ ಅಭಿವೃದ್ಧಿವರೆಗೆ ಮಹತ್ವದ ಹೊಣೆ ಹೊರುತ್ತಿದ್ದಾರೆ.

"ಮಹಿಳೆ ಶಿಕ್ಷಣ ಪಡೆದರೆ ಒಂದು ಕುಟುಂಬವೇ ಶಿಕ್ಷಣ ಪಡೆಯುತ್ತದೆ" ಎಂಬ ಮಾತು ಇಂದು ಹೆಚ್ಚು ಪ್ರಸ್ತುತವಾಗಿದೆ. ಶಿಕ್ಷಣ ಮತ್ತು ಅವಕಾಶಗಳು ದೊರೆತಾಗ ಮಹಿಳೆಯರು ಯಾವುದೇ ಕ್ಷೇತ್ರದಲ್ಲೂ ಪುರುಷರಿಗೆ ಸಮನಾಗಿ ಅಥವಾ ಅದಕ್ಕಿಂತಲೂ ಹೆಚ್ಚು ಸಾಧನೆ ಮಾಡಬಹುದು ಎಂಬುದನ್ನು ಅನೇಕ ಉದಾಹರಣೆಗಳಿವೆ. ಮಹಿಳೆಯರ ಶಕ್ತಿ, ಧೈರ್ಯ ಹಾಗೂ ತ್ಯಾಗವೇ ಸಮಾಜದ ಅಭಿವೃದ್ಧಿಗೆ ಮೂಲಭೂತ ಶಕ್ತಿ. ಆದ–್ದರಿಂದ ಮಹಿಳೆಯರಿಗೆ ಸಮಾನ ಅವಕಾಶ ಮತ್ತು ಗೌರವ ನೀಡುವು ಸಲುವಾಗಿ ರಾಜಕೀಯದಲ್ಲಿ 50% ಮೀಸಲಾತಿ ನೀಡಿರುವುದು ಸಮಾನತೆಯ ಸಮಾಜ ನಿರ್ಮಾಣದತ್ತ ಮಹತ್ವದ ಹೆಜ್ಜೆಯಾಗಿದೆ ಎಂದರು. ಈ ಸಂದರ್ಭದಲ್ಲಿ ತಹಸೀಲ್ದಾರ್ ಮಂಜುನಾಥ ಭೋಗಾವತಿ, ಮಹಿಬೂಬ ಮುದ್ದಾಪೂರ, ಸಿಡಿಪಿಒ ಅಶೋಕ, ಆದಪ್ಪ ಕುಂಬಾರ, ಪಂಪಾಪತಿ ಹೂಗಾರ, ವೆಂಕಟೇಶ, ಶ್ರೀದೇವಿ, ವಿಶೇಷ ಉಪನ್ಯಾಸಕಿ ಸಂಗೀತ ಸೇರಿದಂತೆ ಗ್ಯಾರಂಟಿ ಯೋಜನೆ ಸದಸ್ಯರಾದ ಪೌಲರಾಜ ಯದ್ದಲದಿನ್ನಿ, ನಾಗರತ್ನ ಕಟ್ಟಿಮನಿ ನಿಜಗುಣಿ ಸರ್ಜಾಪೂರ, ಆಲಂಬಾಷ ಸೇರಿದಂತೆ ಇನ್ನಿತರರಿದ್ದರು.

## ನೇಮಕಾತಿ ಪ್ರಕಟಣೆ

ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನೇಮಕಾತಿ 2026–ವಿವಿಧ ವಾಚ್‌ಮನ್ ಮತ್ತು ಗಾರ್ಡ್ನರ್ ಹುದ್ದೆಗಳಿಗೆ ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ನೇಮಕಾತಿ 2026: ವಿವಿಧ ವಾಚ್‌ಮನ್ ಮತ್ತು ಗಾರ್ಡ್ನರ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಮಾರ್ಚ್ 2026 ರ ಅಧಿಕೃತ ಅಧಿಸೂಚನೆಯ ಮೂಲಕ ವಾಚ್‌ಮನ್ ಮತ್ತು ಗಾರ್ಡ್ನರ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ ಅರ್ಜಿಗಳನ್ನು ಆಹ್ವಾನಿಸಿದೆ. ಅಲಿಪುರ್ದಾರ್–ಪಶ್ಚಿಮ ಬಂಗಾಳ, ಆಗ್ರಾ – ಉತ್ತರ ಪ್ರದೇಶ, ಸಾಗರ್ – ಮಧ್ಯಪ್ರದೇಶ, ಧುಲೆ–ಮಹಾರಾಷ್ಟ್ರ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 20–ಮಾರ್ಚ್–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 25–02–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯದಿನಾಂಕ:20–ಮಾರ್ಚ್–2026 ಅಧಿಕೃತ ವೆಬ್‌ಸೈಟ್: centralbankofindia.co.in

## ಶರಣಬಸವೇಶ್ವರ ದೇವಸ್ಥಾನದಲ್ಲಿ ಸಣ್ಣ ತೇರಿನ ರಥೋತ್ಸವ

ನೈಜ್ಯ ದೆಸೆ ನ್ಯೂಸ್

**ಅತ್ತ ಸೂರ್ಯ ತನ್ನ ಕೆಲಸ ಮುಗಿಸಿ ಪಡುವಣದತ್ತ ಸಾಗುತ್ತಿದ್ದಂತೆಯೇ ಇತ್ತ ನಗರದ ಪ್ರಸಿದ್ಧ ಧಾರ್ಮಿಕ ತಾಣ ಶರಣಬಸವೇಶ್ವರ ದೇವಸ್ಥಾನದಲ್ಲಿ 'ಶರಣಬಸವೇಶ್ವರ ಮಹಾರಾಜ್ ಕಿ ಜೈ' ಎಂಬ ಘೋಷದೊಂದಿಗೆ ಶನಿವಾರ ಉಚ್ಚಾಯವು (ಸಣ್ಣ ತೇರಿನ ರಥೋತ್ಸವ) ಸಡಗರ ಸಂಭ್ರಮದಿಂದ ನೆರವೇರಿತು.8ನೇ ಪೀಠಾಧಿಪತಿ ಡಾ.ಶರಣಬಸವಪ್ಪ ಅಪ್ಪ ಅನುಪಸ್ಥಿತಿಯಲ್ಲಿ ನಡೆದ ಮೊದಲ ಜಾತ್ರೆ ಇದಾಗಿದ್ದು, ಭಕ್ತರು ಅಪ್ಪ ಅವರನ್ನು ನೆನಪಿಸಿಕೊಳ್ಳುತ್ತಲೇ ಉಚ್ಚಾಯಕ್ಕೆ ಸಾಕ್ಷಿಯಾದರು.**



ಸಂಜೆಯಾಗುತ್ತಿದ್ದಂತೆಯೇ ನಗರದ ಎಲ್ಲ ರಸ್ತೆಗಳೂ ಶರಣನ ಗುಡಿಯತ್ತ ಸಾಗಿದವು. ಭಕ್ತರು ಕಾಲ್ನಡಿಗೆಯಲ್ಲಿಯೇ ತಮ್ಮ ಮಕ್ಕಳನ್ನು ಕರೆದುಕೊಂಡು ದೇವಸ್ಥಾನದತ್ತ ಸಾಗಿದರು. ಅದಾಗಲೇ ಪೊಲೀಸರು ಎಲ್ಲೆಡೆ ಬ್ಯಾರಿಕೇಡ್‌ಗಳನ್ನು ಹಾಕಿ ಬಿಗಿ ಬಂದೋಬಸ್ತ್ ಮಾಡಿದ್ದರು. ಉಚ್ಚಾಯದ ತೇರನ್ನು ಎಳೆಯುವವರು ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ನೆರವೇರಿಸುವವರು ಮಾತ್ರ ತೇರು ಸಾಗುವ ಮಾರ್ಗದಲ್ಲಿ ಸೇರಿದ್ದರು. ತೇರಿನ ಅಲಂಕಾರ ಮುಗಿದ ಬಳಿಕ ಪುರವಂತರು ತೇರಿನ ಎದುರು ತಮ್ಮ ಕಸರತ್ತು ಪ್ರದರ್ಶಿಸಿದರು. ಮಂಗಳವಾದ್ಯಗಳು ನಿರಂತರವಾಗಿ ಮೊಳಗುತ್ತಿದ್ದವು. ಅಷ್ಟರಲ್ಲಿಯೇ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಅವರು ಮಹಾಮನೆಯಿಂದ ತೇರಿನತ್ತ ಮೆರವಣಿಗೆಯಲ್ಲಿ ಬಂದರು. ಅವರೊಂದಿಗೆ ದೊಡ್ಡಪ್ಪ ಅಪ್ಪ ಅವರ ತಾಯಿ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಚೇರ್‌ಪರ್ಸನ್ ದಾಕ್ಷಾಯಣಿ ಎಸ್. ಅಪ್ಪ, ಪ್ರಧಾನ ಕಾರ್ಯದರ್ಶಿ ಬಸವರಾಜ ದೇಶಮುಖ ಹಾಗೂ ಮಹಾಮನೆಯ ಸದಸ್ಯರು ಜೊತೆಯಾಗಿ ಬಂದರು. ದೊಡ್ಡಪ್ಪ ಅಪ್ಪ ಅವರ ತೇರಿನ ಬಳಿ ಬಂದು ಪೂಜೆ ಸಲ್ಲಿಸುತ್ತಿದ್ದಂತೆಯೇ ಉಚ್ಚಾಯ ರಥೋತ್ಸವ ಶುರುವಾಯಿತು. ಈ ಕ್ಷಣಕ್ಕಾಗಿ ಕಾಯುತ್ತಿದ್ದ ಸಹಸ್ರಾರು ಸಂಖ್ಯೆಯ ಭಕ್ತರು ಶರಣಬಸವೇಶ್ವರ ಮಹಾರಾಜ್ ಕಿ ಜೈ, ಶರಣಬಸವಪ್ಪ ಅಪ್ಪ ಮಹಾರಾಜ್ ಕಿ ಜೈ, ದೊಡ್ಡಪ್ಪ ಅಪ್ಪ ಮಹಾರಾಜ್ ಕಿ ಜೈ ಎಂದು ಘೋಷಣೆಗಳನ್ನು ಕೂಗುತ್ತಾ ರಥದತ್ತ ಉತ್ತತ್ತಿ, ಬಾಳೆಹಣ್ಣುಗಳನ್ನು ಎಸೆದು ತಮ್ಮ ಭಕ್ತಿಯನ್ನು ಸಮರ್ಪಿಸಿದರು. ರಥದೊಂದಿಗೆ ಶರಣಬಸವೇಶ್ವರರನ್ನು ಹೊತ್ತ ಪಲ್ಲಕ್ಕಿಯೂ ಸಾಗಿತು. ಪಾದಗಟ್ಟೆಯ ಬಳಿ ರಥ ನಿಂತ ಬಳಿಕ ಪಲ್ಲಕ್ಕಿಯು ಆವರಣವನ್ನು ಸಂಚರಿಸಿ ವಾಪಸ್ ಬಂತು. ಅದರ ಜೊತೆಯೇ ರಥವು ಹೊರಟು ತನ್ನ ಸ್ವಸ್ಥಾನವನ್ನೂ ಸೇರಿತು. ನಂತರ ಭಕ್ತರು ಕಾಯಿ, ಕರ್ಪೂರ, ಊದಿನ ಕಡ್ಡಿ, ಹೂಗಳೊಂದಿಗೆ ದೇವಸ್ಥಾನಕ್ಕೆ ಭೇಟಿ ನೀಡಿ ತಮ್ಮ ಭಕ್ತಿ ಸಮರ್ಪಿಸಿದರು. ಭಕ್ತರಿಗಾಗಿ ಸಂಸ್ಥಾನದ ವತಿಯಿಂದ ದಾಸೋಹ ವ್ಯವಸ್ಥೆ ಕಲ್ಪಿಸಲಾಗಿತ್ತು. ಬಂದ ಎಲ್ಲ ಭಕ್ತರು ಪ್ರಸಾದ ಸ್ವೀಕರಿಸಿ ಹೋಗಬೇಕು ಎಂದು ದೇವಸ್ಥಾನದ ಆಡಳಿತ ಮಂಡಳಿಯವರು ಧ್ವನಿವರ್ಧಕದಲ್ಲಿ ಮನವಿ ಮಾಡಿಕೊಂಡರು. ಕಳೆದ ಬಾರಿ ರಥೋತ್ಸವದ ಸಂದರ್ಭದಲ್ಲಿ ಕಾಲ್ತುಳಿತದಿಂದ ವ್ಯಕ್ತಿಯೊಬ್ಬ ಮೃತಪಟ್ಟ ಪ್ರಯುಕ್ತ ಕಲಬುರಗಿ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು. ಡಿಸಿಪಿ ಪ್ರವೀಣ ನಾಯಕ್, ಎಸಿಪಿಗಳಾದ ಶರಣಬಸಪ್ಪ ಸುಬೇದಾರ್, ಸುಧಾ ಆದಿ, ವಿವಿಧ ಠಾಣೆಗಳ ಇನ್‌ಸ್ಪೆಕ್ಟರ್‌ಗಳು, ಗೃಹ ರಕ್ಷಕ ದಳದ ಸಿಬ್ಬಂದಿ, ಟ್ರಾಫಿಕ್ ವಾರ್ಡನ್‌ಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿತ್ತು. ಇಂದು ಸಂಜೆ ಶರಣಬಸವೇಶ್ವರರ ರಥೋತ್ಸವ ಇದೇ 8ರಂದು ಸಂಜೆ 6ಕ್ಕೆ ಶರಣಬಸವೇಶ್ವರರ 204ನೇ ಜಾತ್ರಾ ಮಹೋತ್ಸವದ ಅಂಗವಾಗಿ ಭವ್ಯ ರಥೋತ್ಸವ ಜರುಗಲಿದೆ. ಇದಕ್ಕಾಗಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಜಾತ್ರೆಯ ಅಂಗವಾಗಿ ದೇವಸ್ಥಾನದ ಮುಖ್ಯ ಕಟ್ಟಡ ಹಾಗೂ ಮಹಾಮನೆಗೆ ಆಕರ್ಷಕ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಅಲ್ಲಲ್ಲಿ ಬ್ಯಾರಿಕೇಡ್‌ಗಳನ್ನು ಇರಿಸಿ ಬಂದೋಬಸ್ತ್ ಮಾಡಲಾಗುತ್ತಿದೆ. ಶರಣಬಸವೇಶ್ವರರು ದಾಸೋಹಕ್ಕೆ ಹೆಸರುವಾಸಿಯಾಗಿದ್ದರು. ಅದಕ್ಕಾಗಿ ಶರಣಬಸವೇಶ್ವರ ಸಂಸ್ಥಾನ ಅಷ್ಟೇ ಅಲ್ಲದೇ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದಾಸೋಹ ವ್ಯವಸ್ಥೆ ಮಾಡುತ್ತಾರೆ. ಹೀಗಾಗಿ ಶರಣಬಸವೇಶ್ವರ ದೇವಸ್ಥಾನವನ್ನು ಸಂಪರ್ಕಿಸುವ ರಸ್ತೆಗಳಲ್ಲಿ ದಾಸೋಹಕ್ಕಾಗಿ ಶಾಮಿಯಾನಗಳನ್ನು ಹಾಕಲಾಗಿದೆ. ಜಾತ್ರೆಯಲ್ಲಿ ಕಳ್ಳತನ ಪ್ರಕರಣಗಳ ಬಗ್ಗೆ ನಿಗಾ ವಹಿಸಲು ಸ್ಥಳೀಯ ಪೊಲೀಸರ ಜೊತೆಗೆ ಮಹಾರಾಷ್ಟ್ರ ತೆಲಂಗಾಣ ಆಂಧ್ರಪ್ರದೇಶದ ಪೊಲೀಸ್ ಸಿಬ್ಬಂದಿಯನ್ನು ಕರೆಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

## ಮಲ ತ್ಯಾಜ್ಯ ಹಾಗೂ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಜಿ, ಪಂ, ಸಿ ಇ ಓ ಭೇಟಿ ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕಾಂದೂ ಗ್ರಾಮ ಪಂಚಾಯತ್ ಗುರುಗುಂಟದ ಮಲ ತ್ಯಾಜ್ಯ ವಿಲೇವಾರಿ ಘಟಕ ಹಾಗೂ ಘನ ತ್ಯಾಜ್ಯ ವಿಲೇವಾರಿ ಘಟಕಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು ಮಲ ತ್ಯಾಜ್ಯ ವಿಲೇವಾರಿ ಘಟಕ ವನ್ನು ಮಾರ್ಚ್ 31 ರೊಳಗೆ ಕಾಮಗಾರಿಯನ್ನು ಪೂರ್ಣ ಗೊಳಿಸಿ ಕಾರ್ಯರೂಪಕ್ಕೆ ತರಬೇಕು ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚನೆ ನೀಡಿದರು.**

ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ್ ರಾಜ್ ಉಪ ವಿಭಾಗ ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಘನ ತ್ಯಾಜ್ಯ ವಿಲೇವಾರಿ ಘಟಕ ವನ್ನು ಸರಿಯಾಗಿ ವಿಲೇವಾರಿ ಮಾಡಬೇಕು ಎಂದು ಗುತ್ತೇದಾರ







ಇವರಿಗೆ ಖಡಕ್ ಸೂಚನೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ್ ಉಮೇಶ, ಸಹಾಯಕ ನಿರ್ದೇಶಕರು (ಗ್ರಾ. ಉ) ವೆಂಕಟೇಶ್ ದೇಸಾಯಿ, ಸಹಾಯಕ ನಿರ್ದೇಶಕರು (ಪಂ. ರಾಜ್) ಪಂಪನಗೌಡ ಪಾಟೀಲ್, ತಾಲೂಕು ಯೋಜನಾಧಿಕಾರಿಗಳು ಮಹಿಬುಬ್,

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪಂಚಾಯತ್ ರಾಜ್ ಉಪ ವಿಭಾಗ , ಹಣಮಂತಪ್ಪ ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಪರಮೇಶ್ವರ್, ಶಾಖಾಧಿಕಾರಿಗಳು ಮಹದೇವಪ್ಪ, ಕಲ್ಲಿನಾಥ್ ಗುತ್ತೇದಾರ ಪ್ರತಿನಿಧಿ, ತಾಂತ್ರಿಕ ಸಂಯೋಜಕರು ಹನಮನಗೌಡ, ತಾಲೂಕು ಐ. ಇ. ಸಿ. ಸಂಯೋಜಕರು ಬಾಲಪ್ಪ,ಪಂಚಾಯತ್ ಅಭಿವೃದ್ಧಿ ಅಧಿಕಾರಿ ಶಿವಪ್ಪ, ತಾಂತ್ರಿಕ ಸಹಾಯಕ ಜಾವಿದ್ ಪಾಷ, ಅಜಿಮ್ ಪಾಷ, ಅರುಣ ಕುಮಾರ, ಕರವಸಲಿ ಗಾರರು, ಹಾಜರಿದ್ದರು

## ಸಾರ್ವಜನಿಕ ರಸ್ತೆಯನ್ನು ಅನಧಿಕೃತವಾಗಿ ಅಗೆದು ಹಾನಿ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ದ ಸಂ ಸ ಒತ್ತಾಯ



ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ಪಟ್ಟಣದ ಪುರಸಭೆ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣದ ಕಾಂಪ್ಲೆಕ್ಸ್ ಎದುರುಗಡೆ ಇರುವ "ಜೀಶನ್ ಅಪನಾ ಹೈದರಾಬಾದ್" ರೆಸ್ಟೋರೆಂಟ್ ಕಟ್ಟಡದ ಮಾಲೀಕರು ಯಾವುದೇ ಪೂರ್ವಾನುಮತಿ ಪಡೆಯದೆ ಸಾರ್ವಜನಿಕ**



**ರಸ್ತೆಯನ್ನು ಅಗೆದಿದ್ದಾರೆ. ಸಾರ್ವಜನಿಕ ರಸ್ತೆಯನ್ನು ಅನಧಿಕೃತವಾಗಿ ಅಗೆದು ಹಾನಿ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪುರಸಭೆ ಮುಖ್ಯಧಿಕಾರಿಗಳಿಗೆ ದ ಸಂ ಸ ತಾಲೂಕ ಅಧ್ಯಕ್ಷ ಮೋಹನ್ ಗೋಸ್ಲೆ ಮನವಿಯನ್ನು ಸಲ್ಲಿಸಿದರು.**

ಈ ರಸ್ತೆಯು ಇತ್ತೀಚೆಗಷ್ಟೇ ಹೊಸದಾಗಿ ನಿರ್ಮಾಣಗೊಂಡಿದ್ದು, ಮಾಲೀಕರು ತಮ್ಮ ವೈಯಕ್ತಿಕ ಹಿತಾಸಕ್ತಿಗಾಗಿ ರಸ್ತೆಯನ್ನು ಕಿತ್ತು ಹಾಕಿರುವುದರಿಂದ ಸಾರ್ವಜನಿಕ ಆಸ್ತಿಗೆ ನಷ್ಟ ಉಂಟಾಗಿದೆ. ಇದರಿಂದಾಗಿ ಈ ಭಾಗದಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೀವ್ರ ತೊಂದರೆಯಾಗುತ್ತಿದ್ದು, ಅಪಘಾತಗಳು ಸಂಭವಿಸುವ ಭೀತಿಯಿದೆ.

ಸಂಬಂಧಪಟ್ಟ ರೆಸ್ಟೋರೆಂಟ್ ಮಾಲೀಕರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಆಸ್ತಿಗೆ ಹಾನಿ ಮಾಡಿರುವುದಕ್ಕೆ ಅವರಿಗೆ ದಂಡ ವಿಧಿಸಬೇಕು. ಕೂಡಲೇ ರಸ್ತೆಯನ್ನು ಸರಿಪಡಿಸಿ ಸಾರ್ವಜನಿಕರ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಹಾಗೂ ಕೂಡಲೇ ತಾವು ಸ್ಥಳ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಹೇಳಿದರು. ಈ ಸಂದರ್ಭದಲ್ಲಿ ರಾಜು ತಂಬಾಕೆ ಸಮಾಜ ಸೇವಕರು ಹಾಗೂ ವಾರ್ಡ್ ನಂ, 17 ಸ್ಥಳೀಯ ನಿವಾಸಿ ಇದ್ದರು.

# ಗ್ರಂಥಪಾಲಕರ ಹುದ್ದೆ ಭರ್ತಿಗೆ ಮನವಿ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಜ್ಯದ ವಿವಿಧ ಶಿಕ್ಷಣ ಮತ್ತು ಸರ್ಕಾರಿ ಇಲಾಖೆಗಳಲ್ಲಿನ ಖಾಲಿ ಇರುವ ಗ್ರಂಥಪಾಲಕರ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಬೇಕು ಎಂದು ಒತ್ತಾಯಿಸಿ ಕಲ್ಯಾಣ ಕರ್ನಾಟಕ ಗ್ರಂಥಪಾಲಕರ ಸಂಘದ ಪದಾಧಿಕಾರಿಗಳು ಶನಿವಾರ ಜಿಲ್ಲಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದರು.**

ರಾಜ್ಯದ ವಿಶ್ವವಿದ್ಯಾಲಯಗಳು, ಸರ್ಕಾರಿ ಹಾಗೂ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು, ಪಾಲಿಟೆಕ್ನಿಕ್, ಎಂಜಿನಿಯರ್ ಕಾಲೇಜುಗಳಲ್ಲಿ ಅನೇಕ ಮಂಜೂರಾದ ಗ್ರಂಥಪಾಲಕರ ಹುದ್ದೆಗಳು 16 ವರ್ಷಗಳಿಂದ ಖಾಲಿ ಇವೆ. ಕೂಡಲೇ



ತುಂಬಬೇಕು ಎಂದು ಒತ್ತಾಯಿಸಿದರು. ಇದಲ್ಲದೆ, ಸಾರ್ವಜನಿಕ ಗ್ರಂಥಾಲಯಗಳು, ಜಿಲ್ಲಾ ಕೇಂದ್ರ ಗ್ರಂಥಾಲಯಗಳು, ನಗರ ಕೇಂದ್ರ ಗ್ರಂಥಾಲಯಗಳು ಹಾಗೂ ತಾಲ್ಲೂಕು ಗ್ರಂಥಾಲಯಗಳಲ್ಲಿಯೂ ಹುದ್ದೆಗಳು ಭರ್ತಿಯಾಗಿಲ್ಲ. ಸರ್ಕಾರಿ ವೈದ್ಯಕೀಯ ಕಾಲೇಜುಗಳ ಗ್ರಂಥಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಬೇಕು ಎಂದು ಆಗ್ರಹಿಸಿದರು.

ವಿದ್ಯಾರ್ಥಿಗಳಿಗೆ ಸಮರ್ಪಕ ಶೈಕ್ಷಣಿಕ ಮತ್ತು ಸಂಶೋಧನಾ ಮಾರ್ಗದರ್ಶನ ಸಿಗುತ್ತಿಲ್ಲ. ಸಾರ್ವಜನಿಕ ಗ್ರಂಥಾಲಯಗಳ ಸೇವಾಗುಣ ಮಟ್ಟ ಕುಸಿಯುತ್ತಿದೆ. ನ್ಯಾಯಾಂಗ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಮಾಹಿತಿ ತ್ವರಿತ ಲಭ್ಯತೆಗೆ ಹಿನ್ನಡೆಯಾಗುತ್ತಿದೆ ಎಂದು ವಿವರಿಸಿದ್ದಾರೆ. ಆದಿಕವಿ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಮುಖ್ಯ ಗ್ರಂಥಪಾಲಕ ಜಿ.ಎಸ್.ಬಿರದಾರ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಮುಖ್ಯ ಗ್ರಂಥಪಾಲಕ ಮಚೇಂದ್ರನಾಥ.ಎಸ್, ಕರ್ನಾಟಕ ರಾಜ್ಯ ಗ್ರಂಥಾಲಯ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಪರಮಾನಂದ ಜೆ.ಹಂಗರಗಿ, ಉಪಾಧ್ಯಕ್ಷ ಸತೀಶಕುಮಾರ ಎಸ್., ಕಾರ್ಯದರ್ಶಿ ಸುರೇಶ ಪಾಟೀಲ, ಸದಸ್ಯ ಶೊಭ ಕೆ.ವಿ ಹಾಗೂ ಗ್ರಂಥಪಾಲಕರು ಉಪಸ್ಥಿತರಿದ್ದರು.

## ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ವಿವಿಧ ಒಕ್ಕೂಟಗಳ ಉದ್ಘಾಟನೆ




ನೈಜ್ಯ ದೆಸೆ ನ್ಯೂಸ್

**ಬದಲಾಗುತ್ತಿರುವ ಸಮಾಜದ ಧೋರಣೆಗಳಿಗೆ ಅನುಗುಣವಾಗಿ ಶೈಕ್ಷಣಿಕ ವಲಯದಲ್ಲಿಯೂ ಆಗಬಹುದಾದ ಬದಲಾವಣೆಗೆ ತಕ್ಕಂತೆ ಗುಣಾತ್ಮಕ ಶಿಕ್ಷಣ ವ್ಯವಸ್ಥೆಯನ್ನು ಅನಾವರಣಗೊಳಿಸಲು ಪ್ರಶಿಕ್ಷಣಾರ್ಥಿಗಳು ಪೂರ್ವ ಸಿದ್ಧತೆ ಮಾಡಿಕೊಳ್ಳಬೇಕಾದ ಅನಿವಾರ್ಯತೆಯಿದೆ' ಎಂದು ಕೊಪ್ಪಳ ವಿಶ್ವವಿದ್ಯಾಲಯದ ಉಪಕುಲಪತಿ ಎಸ್.ವಿ. ಡಾಣಿ ಹೇಳಿದರು.**

ಪಟ್ಟಣದ ಎಸ್.ಎ. ನಿಂಗೋಜಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳ ಸ್ವಾಗತ ಸಮಾರಂಭ ಹಾಗೂ ವಿವಿಧ ಒಕ್ಕೂಟಗಳ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು. 'ಅತ್ಯಂತ ಜವಾಬ್ದಾರಿಯುತ ಹುದ್ದೆಯನ್ನು ಅಲಂಕರಿಸುವ ಪ್ರಶಿಕ್ಷಣಾರ್ಥಿಗಳ ಇತರೆ ವಿದ್ಯಾರ್ಥಿಗಳಂತೆ ಇರದೇ ಭಿನ್ನವಾಗಿಯೇ ಇರುವುದು, ಅಧ್ಯಯನ ಶೀಲರಾಗಿರುವುದು ಮುಖ್ಯ. ಸಮುದಾಯ ಸಂಘಟನೆಯ ಮಧ್ಯೆ ಶಿಕ್ಷಕರಾಗಿ ಕಾರ್ಯನಿರ್ವಹಿಸುವುದರಿಂದ ಉತ್ತಮ ವ್ಯಕ್ತಿತ್ವ ರೂಢಿಸಿಕೊಳ್ಳುವುದು ಅವಶ್ಯಕ' ಎಂದರು.

ಮುನಿರಾಬಾದ್ ಡಯಟ್ ಉಪನ್ಯಾಸಕ ಮಲ್ಲಿಕಾರ್ಜುನ ಬೇಲೇರಿ ಮಾತನಾಡಿದರು. ಉಪನ್ಯಾಸಕ ಎಂ.ಪ್ರಾಣೇಶ, ವಕೀಲ ಸಂಗಮೇಶ ಅಂಗಡಿ, ಜಿಲ್ಲಾ ಕಸಾಪ ಮಾಜಿ ಅಧ್ಯಕ್ಷ ವೀರಪ್ಪ ನಿಂಗೋಜಿ ಉಪಸ್ಥಿತರಿದ್ದರು.

## ಸಂಸ್ಕಾರಯುತ ಶಿಕ್ಷಣವೇ ಉತ್ತಮ ಸಮಾಜ ನಿರ್ಮಾಣಕ್ಕೆ ಮಾರ್ಗ: ಸದಾಶಿವ ಮಹಾಸ್ವಾಮಿಗಳು

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಶ್ರೀ ರಾಜಾ ಹನುಮಪ್ಪ ನಾಯಕ ದೊರೆ ಸ್ಮಾರಕ ಸಮಾಜ ಸೇವಾ ಸಂಸ್ಥೆ ವತಿಯಿಂದ ಶ್ರೀ ರಂಗನಾಥ ವಿದ್ಯಾಲಯ ಕನ್ನಡ ಹಿರಿಯ ಪ್ರಾಥಮಿಕ ಹಾಗೂ ಪ್ರೌಢ ಶಾಲೆಯ ಅವರಣದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ 10ನೇ ತರಗತಿ ವಿದ್ಯಾರ್ಥಿಗಳಿಗೆ ಬಿಳ್ಕೋಡುಗೆ ಸಮಾರಂಭ ಕಾರ್ಯಕ್ರಮ ನಡೆಯಿತು.**

ಚೀಕಲಪರ್ವಿ ರುದ್ರಮುನೀಶ್ವರ ಮಠದ ಸದಾಶಿವ ಮಹಾಸ್ವಾಮಿಗಳು ಕಾರ್ಯಕ್ರಮವನ್ನು ಉದ್ಘಾಟಿಸಿ ಆಶೀರ್ವಚನ ನೀಡಿ, ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ ಮತ್ತು ವಿನಯವನ್ನು ನೀಡುವಂತಹ ಶಿಕ್ಷಣ ಸಂಸ್ಥೆಗಳು ಸಮಾಜದಲ್ಲಿ ಉತ್ತಮ ವ್ಯಕ್ತಿಗಳನ್ನು ರೂಪಿಸಲು ನೆರವಾಗುತ್ತವೆ. ಸಂಸ್ಕಾರಯುತ ಶಿಕ್ಷಣವೇ ಉತ್ತಮ ಸಮಾಜ ನಿರ್ಮಾಣಕ್ಕೆ ಮಾರ್ಗವಾಗುತ್ತದೆ ಎಂದು ಹೇಳಿದರು.



ಮನೆ ಬಳಿಕ ಮಕ್ಕಳು ಹೆಚ್ಚು ಸಮಯವನ್ನು ಶಾಲೆಯಲ್ಲಿ ಗುರುಗಳೊಂದಿಗೆ ಕಳೆಯುವುದರಿಂದ ಗುರುಗಳಿಗೆ ಮಕ್ಕಳಲ್ಲಿ ತಂದೆ–ತಾಯಿ ಹಾಗೂ ಗುರುಗಳ ಬಗ್ಗೆ ಪೂಜ್ಯಭಾವನೆ ಬೆಳೆಸುವ ಜವಾಬ್ದಾರಿ ಇದೆ ಎಂದು ತಿಳಿಸಿದರು. ಪಾಲಕರು ಮಕ್ಕಳಿಗಾಗಿ ಆಸ್ತಿ ಮಾಡುವುದಕ್ಕಿಂತ ಮಕ್ಕಳನ್ನೇ ಆಸ್ತಿಯನ್ನಾಗಿ ಬೆಳೆಸಬೇಕು. ಹೆಣ್ಣುಮಕ್ಕಳಿಗೂ ಉನ್ನತ ಶಿಕ್ಷಣ ನೀಡಲು ಹೆಚ್ಚಿನ ಆದ್ಯತೆ ನೀಡಬೇಕು ಎಂದರು.

ಶ್ರೀ ರಂಗನಾಥ ವಿದ್ಯಾಲಯದ ಅಧ್ಯಕ್ಷರು ಹಾಗೂ ತಾಲೂಕು ಖಾಸಗಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾದ ರಾಜಾ ಸುಭಾಶ್ಚಂದ್ರ ನಾಯಕ ಮಾತನಾಡಿ, ಪಟ್ಟಣದ ಬಡ ಕುಟುಂಬಗಳ ಮಕ್ಕಳಿಗೆ ಕಡಿಮೆ ಶುಲ್ಕದಲ್ಲಿ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಪಠ್ಯದ ಜೊತೆಗೆ ವಸತಿ



ವಿದ್ಯಾಲಯಗಳ ಪ್ರವೇಶ ಪರೀಕ್ಷೆಗಳಿಗೆ ಸಿದ್ಧತೆ, ಕ್ರೀಡೆಗಳಿಗೆ ಉತ್ತೇಜನ, ಕೋವಿಡ್ ಸಮಯದಲ್ಲಿ ಆಹಾರ ಕಿಟ್‌ಗಳ ವಿತರಣೆ, ರಾಜಾ ವಸಂತ ನಾಯಕ ಅವರ ಆಶಯದಂತೆ ಪರಿಸರ ಸಂರಕ್ಷಣೆ ಸೇರಿದಂತೆ ಹಲವು ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು. ಮಹಿಳಾ ದಿನಾಚರಣೆಯ ಮಹತ್ವ ಕುರಿತು ಪುರಸಭೆ ಹಿರಿಯ ಸದಸ್ಯರಾದ ಲಕ್ಷ್ಮಿದೇವಿ ನಾಯಕ ವಕೀಲರು ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ಶಾಲೆಯ ವಿದ್ಯಾರ್ಥಿಗಳು ತಮ್ಮ ತಾಯಂದಿರಿಗೆ ಪಾದಪೂಜೆ ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥಾಪಕರಾದ ಲಕ್ಷ್ಮಿದೇವಿ, ಮುಖ್ಯಗುರು ಶರಣಮ್ಮ ಭಂಗಿ, ನೇತಾಜಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ವಿಜಯಲಕ್ಷ್ಮಿ, ಬಿ.ವಿ.ಆರ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಪದ್ಮವತಿ, ಬಿ.ವಿ.ಆರ್ ಕಿಡ್ಸ್ ಮುಖ್ಯಸ್ಥರಾದ ಅಮರವಾಣಿ, ಆರ್ಟ್ ಆಫ್ ಲಿವಿಂಗ್ ತಾಲೂಕು ಸಂಚಾಲಕರಾದ ರಾಣಿವನಮಾಲದೇವಿ, ಪೂಜಾ ವಕೀಲರು, ಜ್ಞಾನ ಭಾರತಿ ಶಿಕ್ಷಣ ಸಂಸ್ಥೆ ಪೋತ್ನಾಳ್ ಕಾರ್ಯದರ್ಶಿ ಮುಮ್ತಾಜ್ ಬೇಗಂ, ವಿದ್ಯಾಭಾರತಿ ಶಿಕ್ಷಣ ಸಂಸ್ಥೆ ಪೋತ್ನಾಳ್ ಕಾರ್ಯದರ್ಶಿ ಸಾರಾ ಆರ್ ತಾಳಿಕೋಟೆ, ಶೈನಾಜ್ ಬೇಗಂ, ವಿಶ್ವಚೇತನ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಗೀತಾ ಹಿರೇಮಠ, ರೈಸಿಂಗ್ ಸನ್ ಶಾಲೆಯ ಮುಖ್ಯಸ್ಥರಾದ ಹೀನಾ ಆಜ್ಮೀರ್ ಸೇರಿದಂತೆ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪಾಲಕರು ಉಪಸ್ಥಿತರಿದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಇಂಟೀರಿಯರ್ ಡೆಕೋರೇಷನ್

ಇಂಟೀರಿಯರ್ ಡೆಕೋರೇಷನ್ (ಒಳಾಂಗಣ ವಿನ್ಯಾಸ) ಕೋರ್ಸ್‌ಗಳು ಮನೆ, ಕಚೇರಿಗಳನ್ನು ಸುಂದರವಾಗಿ ವಿನ್ಯಾಸಗೊಳಿಸುವ ಕಲೆ ಮತ್ತು ವಿಜ್ಞಾನವನ್ನು ಕಲಿಸುತ್ತವೆ. ಮನುಷ್ಯರಾಗಿ, ನಾವು ನಮ್ಮ ವಾಸ ಮತ್ತು ಕೆಲಸದ ಸ್ಥಳಗಳನ್ನು ವ್ಯಾಖ್ಯಾನಿಸುವ ಗೋಡೆಗಳು, ನೆಲ ಮತ್ತು ಛಾವಣಿಗಳಿಂದ ಸುತ್ತುವರೆದಿರುವ ಒಳಾಂಗಣದಲ್ಲಿ ಗಣನೀಯ ಪ್ರಮಾಣದ ಸಮಯವನ್ನು ಕಳೆಯುತ್ತೇವೆ. ಆದರೆ ಒಂದು ಜಾಗವನ್ನು ನಿಜವಾಗಿಯೂ ಅಸಾಧಾರಣವಾಗಿಸುವುದು ಯಾವುದು ಕೇವಲ ಕ್ರಿಯಾತ್ಮಕವಾಗಿರುವುದಕ್ಕಿಂತ ಸೌಕರ್ಯ, ಶೈಲಿ ಮತ್ತು ಸ್ಫೂರ್ತಿಯ ಓಯಸಿಸ್ ಆಗುವುದನ್ನು ಯಾವುದು ಪ್ರತ್ಯೇಕಿಸುತ್ತದೆ ಉತ್ತರವು ಒಳಾಂಗಣ ವಿನ್ಯಾಸದ ಕಲೆ ಮತ್ತು ವಿಜ್ಞಾನದಲ್ಲಿದೆ. ಐಷಾರಾಮಿ ನಿವಾಸಗಳಿಂದ ನಯವಾದ ಕಚೇರಿ ಕಟ್ಟಡಗಳವರೆಗೆ, ಒಳಾಂಗಣ ವಿನ್ಯಾಸಕರು ಖಾಲಿ ಸ್ಥಳಗಳನ್ನು ನಮ್ಮ ವ್ಯಕ್ತಿತ್ವಗಳು, ಮೌಲ್ಯಗಳು ಮತ್ತು ಆಕಾಂಕ್ಷೆಗಳನ್ನು ಪ್ರತಿಬಿಂಬಿಸುವ ಉಸಿರುಕಟ್ಟುವ ಪರಿಸರಗಳಾಗಿ ಪರಿವರ್ತಿಸುವ ಶಕ್ತಿಯನ್ನು ಹೊಂದಿದ್ದಾರೆ. ಸೃಜನಶೀಲತೆ, ತಾಂತ್ರಿಕ ಜ್ಞಾನ ಮತ್ತು ಮಾನವ ನಡವಳಿಕೆಯ ಆಳವಾದ ತಿಳುವಳಿಕೆಯನ್ನು ಸಂಯೋಜಿಸುವ ಮೂಲಕ, ಅವರು ಬೆರಗುಗೊಳಿಸುತ್ತದೆ ಮಾತ್ರವಲ್ಲದೆ ಯೋಗಕ್ಷೇಮ, ಉತ್ಪಾದಕತೆ ಮತ್ತು ಸಂತೋಷವನ್ನು ಬೆಳೆಸುವ ಸ್ಥಳಗಳನ್ನು ರಚಿಸುತ್ತಾರೆ. ಈ ಬ್ಲಾಗ್‌ನಲ್ಲಿ, ನಾವು ಒಳಾಂಗಣ ವಿನ್ಯಾಸದ ಪ್ರಪಂಚವನ್ನು ಪರಿಶೀಲಿಸುತ್ತೇವೆ, ಅದರ ವ್ಯಾಖ್ಯಾನ, ಇತಿಹಾಸ, ಪ್ರಕೃತಿ, ವ್ಯಾಪ್ತಿ, ನಾವೀನ್ಯತೆಗಳು, ಪ್ರಯೋಜನಗಳು ಮತ್ತು ಭವಿಷ್ಯದ ನಿರೀಕ್ಷೆಗಳನ್ನು ಅನ್ವೇಷಿಸುತ್ತೇವೆಇವುಗಳಲ್ಲಿ ಡಿಪ್ಲೊಮಾ, ಬಿಎಸ್ಸಿ (BSc), ಮತ್ತು ಸರ್ಟಿಫಿಕೇಟ್ ಕೋರ್ಸ್‌ಗಳು ಲಭ್ಯವಿದ್ದು, 10+2 ಅಥವಾ ತತ್ಸಮಾನ ವಿದ್ಯಾರ್ಹತೆ ಇರಬೇಕು. ಈ ಕೋರ್ಸ್‌ಗಳು ವಿನ್ಯಾಸ ತತ್ವಗಳು, ಬಣ್ಣಗಳ ಆಯ್ಕೆ, ಮತ್ತು ಪೀಠೋಪಕರಣಗಳ ವ್ಯವಸ್ಥೆಯ ಮೇಲೆ ಗಮನ ಹರಿಸುತ್ತವೆ. ಇಂಟೀರಿಯರ್ ಡೆಕೋರೇಷನ್ ಕೋರ್ಸ್ ವಿವರಗಳು: ಕೋರ್ಸ್ ಪ್ರಕಾರಗಳು: ಡಿಪ್ಲೊಮಾ (Diploma in Interior Design/Decoration): 1–2 ವರ್ಷಗಳು. ಪದವಿ (BSc/BA in Interior Design): 3–4 ವರ್ಷಗಳು. ಸರ್ಟಿಫಿಕೇಟ್ ಕೋರ್ಸ್: 3 ರಿಂದ 6 ತಿಂಗಳುಗಳು. ಪ್ರವೇಶ ಪರೀಕ್ಷೆಗಳು: NID, NIFT, UCEED, SEED. ಕಲಿಕಾ ವಿಷಯಗಳು: ಬಣ್ಣದ ಯೋಜನೆ, ವಸ್ತುಗಳ ಆಯ್ಕೆ, ಜಾಗದ ಯೋಜನೆ (Space Planning), ಕಂಪ್ಯೂಟರ್ ಎಡೆಡ್ ಡಿಸೈನ್ (CAD), ಲೈಟಿಂಗ್, ಮತ್ತು ಪೀಠೋಪಕರಣಗಳ ವಿನ್ಯಾಸ. ಉದ್ಯೋಗಾವಕಾಶಗಳು: ಇಂಟೀರಿಯರ್ ಡಿಸೈನರ್, ಡೆಕೋರೇಟರ್, ಲ್ಯಾಂಡ್‌ಸ್ಕೇಪ್ ಡಿಸೈನರ್, ಮತ್ತು ಸ್ವಂತ ಉದ್ಯಮ. ಸೃಜನಶೀಲತೆ (Creativity), ದೃಶ್ಯೀಕರಣ (Visualization), ಮತ್ತು ಸಂವಹನ ಕೌಶಲ್ಯಗಳು ಮುಖ್ಯ. ಅರ್ಹತೆ: ಪದವಿ ಕೋರ್ಸ್‌ಗಳಿಗೆ 12ನೇ ತರಗತಿ (ಯಾವುದೇ ವಿಭಾಗ). ಡಿಪ್ಲೊಮಾ ಕೋರ್ಸ್‌ಗಳಿಗೆ 10ನೇ ಅಥವಾ 12ನೇ ತರಗತಿ.

1ನೇ ಪುಟದಿಂದ....

ಹೆಚ್ಚಿಸಿ, ಸಮಾಜಕ್ಕೆ ಉತ್ತಮ ಸಂದೇಶ ನೀಡುತ್ತವೆ ಎಂದು ಹೇಳಿದರು. ನಾರಿ ಶಕ್ತಿಗೆ ಜೈಕಾರ ನವದೆಹಲಿ, ಮಾ. 8– ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಎಲ್ಲಾ ಮಹಿಳೆಯರಿಗೆ ಶುಭಾಶಯಗಳನ್ನು ತಿಳಿಸಿದ್ದಾರೆ ಮತ್ತು ಭಾರತದ ನಾರಿ ಶಕ್ತಿಯ ಸಾಧನೆಗಳು ಹೆಮ್ಮೆಯ ಮೂಲವಾಗಿವೆ ಎಂದು ಹೇಳಿದರು. ಮಹಿಳಾ ಸಬಲೀಕರಣವು ತಮ್ಮ ಸರ್ಕಾರದ ವಿವಿಧ ಯೋಜನೆಗಳು ಮತ್ತು ಉಪಕ್ರಮಗಳ ತಿರುಳಾಗಿದೆ ಮತ್ತು ಪ್ರತಿಯೊಬ್ಬ ಮಹಿಳೆ ತನ್ನ ಪೂರ್ಣ ಸಾಮರ್ಥ್ಯವನ್ನು ಅರಿತುಕೊಳ್ಳಲು ಮತ್ತು ಭಾರತದ ಅಭಿವೃದ್ಧಿಯ ಪ್ರಯಾಣಕ್ಕೆ ಕೊಡುಗೆ ನೀಡಲು ಅನುವು ಮಾಡಿಕೊಡುವ ಅವಕಾಶಗಳನ್ನು ಸೃಷ್ಟಿಸಲು ಅದು ಬದ್ಧವಾಗಿದೆ ಎಂದು ಅವರು ಹೇಳಿದರು. ಅಂತರರಾಷ್ಟ್ರೀಯ ಮಹಿಳಾ ದಿನದಂದು, ನಮ್ಮ ಎಲ್ಲಾ ನಾರಿ ಶಕ್ತಿಗಳಿಗೆ ನಾನು ನನ್ನ ಶುಭಾಶಯಗಳನ್ನು ಸಲ್ಲಿಸುತ್ತೇನೆ. ಪ್ರತಿಯೊಂದು ಕ್ಷೇತ್ರದಲ್ಲೂ, ಮಹಿಳೆಯರು ದೃಢನಿಶ್ಚಯ, ಸೃಜನಶೀಲತೆ ಮತ್ತು ಸಾಟಿಯಿಲ್ಲದ ಉತ್ಸಾಹದಿಂದ ಭಾರತದ ಪ್ರಗತಿಯನ್ನು ರೂಪಿಸುತ್ತಿದ್ದಾರೆ. ಅವರ ಸಾಧನೆಗಳು ನಮ್ಮ ರಾಷ್ಟ್ರಕ್ಕೆ ಸ್ಫೂರ್ತಿ ನೀಡುತ್ತವೆ ಮತ್ತು ವಿಕ್ಷಿತ ಭಾರತವನ್ನು ನಿರ್ಮಿಸುವ ನಮ್ಮ ಸಾಮೂಹಿಕ ಸಂಕಲ್ಪವನ್ನು ಬಲಪಡಿಸುತ್ತವೆ ಎಂದು ಅವರು ಸಂದೇಶದಲ್ಲಿ ತಿಳಿಸಿದ್ದಾರೆ.

ಭಾರತವು ಮತ್ತಷ್ಟು ಮುಂದುವರೆದಂತೆ, ಮಹಿಳೆಯರ ಆಕಾಂಕ್ಷೆಗಳು ಮತ್ತು ಕೊಡುಗೆಗಳು ಬಲವಾದ ಮತ್ತು ಸಮೃದ್ಧ ರಾಷ್ಟ್ರದತ್ತ ದೇಶದ ಸಾಮೂಹಿಕ ಪ್ರಯಾಣಕ್ಕೆ ಮಾರ್ಗದರ್ಶನ ನೀಡುತ್ತಲೇ ಇರುತ್ತವೆ ಎಂದು ಮೋದಿ ಹೇಳಿದರು. ಭಾರತದ ನಾರಿ ಶಕ್ತಿಯ ಸಾಧನೆಗಳು ಹೆಮ್ಮೆಯ ಮೂಲವಾಗಿದೆ ಮತ್ತು ರಾಷ್ಟ್ರ ನಿರ್ಮಾಣದಲ್ಲಿ ಪರಿವರ್ತನಾಶೀಲ ಪಾತ್ರದ ಪ್ರಬಲ ಜ್ಞಾಪನೆಯಾಗಿದೆ ಎಂದು ಅವರು ಹೇಳಿದರು. ಮಹಿಳೆಯರಿಂದ ದೇಶ ಸಶಕ್ತ ನವಭಾರತದ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಅನನ್ಯ ಎಂದು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ತಿಳಿಸಿದ್ದಾರೆ.ದೇಶದ ಸಮಸ್ತ ನಾರಿಶಕ್ತಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳನ್ನು ಕೋರಿರುವ ಅವರು ಮಹಿಳೆಯರು ಸಶಕ್ತರಾದರೆ ಮಾತ್ರ ದೇಶ ಸಶಕ್ತವಾಗಲು ಸಾಧ್ಯಎಂದಿದಾರೆ. ಅಂತಾರಾಷ್ಟ್ರೀಯ ಮಹಿಳಾ ದಿನದಂದು ಭಾರತದ ನಾರಿ ಶಕ್ತಿಗೆ ಅವರು ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# ಮಹಿಳೆ ಎಂದರೆ ಪ್ರೀತಿ, ಶಕ್ತಿ, ತ್ಯಾಗ ಮತ್ತು ಪ್ರೇರಣೆ



ಮಹಿಳೆ ಎಂದರೆ ಕೇವಲ ಒಂದು ವ್ಯಕ್ತಿ ಮಾತ್ರವಲ್ಲ; ಅವಳು ಮಗಳು, ಪತ್ನಿ, ತಾಯಿ, ಅಜ್ಜಿ ಹಾಗೂ ಸಮಾಜದ ಮಾರ್ಗದರ್ಶಕಿ. ಮಹಿಳೆಯ ಜೀವನ ಅನೇಕ ಪಾತ್ರಗಳಿಂದ ಕೂಡಿದ್ದು, ಕುಟುಂಬ ಮತ್ತು ಸಮಾಜದ ಅಭಿವೃದ್ಧಿಯಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಮಹಿಳೆ ಎಂದರೆ ಪ್ರೀತಿ, ತ್ಯಾಗ, ಸಹನೆ, ಕಾಳಜಿ ಮತ್ತು ಶಕ್ತಿಯ ಪ್ರತೀಕ. ಮಗಳು ಆಗಿರುವಾಗ ಅವಳು ಮನೆಯ ಸಂತೋಷವಾಗಿರುತ್ತಾಳೆ. ಪತ್ನಿಯಾಗಿ ಕುಟುಂಬವನ್ನು ಪ್ರೀತಿಯಿಂದ ಒಗ್ಗೂಡಿಸಿ ನಡೆಸುತ್ತಾಳೆ. ತಾಯಿಯಾಗಿ ತನ್ನ ಮಕ್ಕಳಿಗಾಗಿ ಅನೇಕ ಕಷ್ಟಗಳನ್ನು ಸಹಿಸುತ್ತಾಳೆ. ಪ್ರಸವದ ನೋವು (Delivery Pain) ಜಗತ್ತಿನ ಅತ್ಯಂತ ಕಠಿಣವಾದ ನೋವುಗಳಲ್ಲಿ ಒಂದಾಗಿದೆ.

ಆದರೂ ತಾಯಿ ತನ್ನ ಮಗುವಿನ ಸಂತೋಷಕ್ಕಾಗಿ ಆ ನೋವನ್ನು ಸಹಿಸಿಕೊಳ್ಳುತ್ತಾಳೆ. ಮಕ್ಕಳನ್ನು ಸಾಕಲು ತನ್ನ ಅನೇಕ ಆಸೆ–ಆಕಾಂಕ್ಷೆಗಳನ್ನು ಬಿಟ್ಟು ಸ್ವಯಂ ತ್ಯಾಗ ಮಾಡುತ್ತಾಳೆ. ಆದ್ದ–ರಿಂದ ಮಹಿಳೆಯನ್ನು ಪ್ರೀತಿ ಮತ್ತು ತ್ಯಾಗದ ಪ್ರತಿರೂಪ ಎಂದು ಕರೆಯಲಾಗುತ್ತದೆ.

ಇಂದಿನ ಕಾಲದಲ್ಲಿ ಮಹಿಳೆಯರು ಮನೆ ಕೆಲಸದ ಜೊತೆಗೆ ಉದ್ಯೋಗ ಕ್ಷೇತ್ರದಲ್ಲಿಯೂ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಅವರು ಕುಟುಂಬ ಮತ್ತು ಉದ್ಯೋಗದ ಜವಾಬ್ದಾರಿಗಳನ್ನು ಸಮತೋಲನದಿಂದ ನಿರ್ವಹಿಸುತ್ತಿದ್ದಾರೆ. ವೈದ್ಯರು, ಶಿಕ್ಷಕರು, ವಿಜ್ಞಾನಿಗಳು, ಆಡಳಿತಾಧಿಕಾರಿಗಳು, ಉದ್ಯಮಿಗಳು, ನಾಯಕರು ಹಾಗೂ ಸಮಾಜಸೇವಕರಾಗಿ ಮಹಿಳೆಯರು ದೇಶದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡುತ್ತಿದ್ದಾರೆ.

ಅನೇಕ ಮಹಿಳೆಯರು ತಮ್ಮ ಪ್ರತಿಭೆ, ಪರಿಶ್ರಮ ಮತ್ತು ಧೈರ್ಯದಿಂದ ದೇಶವನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ.

ಆದರೆ ಇಂದಿನ ಸಮಾಜದಲ್ಲಿ ಮಹಿಳೆಯರು ಇನ್ನೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಮಹಿಳೆಯರ ಮೇಲಿನ ಹಿಂಸೆ, ಕಿರುಕುಳ, ಅಸಮಾನತೆ, ವೇತನದಲ್ಲಿ ವ್ಯತ್ಯಾಸ, ಸುರಕ್ಷತೆ ಕೊರತೆ, ಬಾಲ್ಯ ವಿವಾಹ, ಹಾಗೂ ಶಿಕ್ಷಣದ ಕೊರತೆ ಪ್ರಮುಖ ಸಮಸ್ಯೆಗಳಾಗಿವೆ. ಕೆಲವೆಡೆ ಮಹಿಳೆಯರಿಗೆ ತಮ್ಮ ಅಭಿಪ್ರಾಯವನ್ನು ಹೇಳುವ ಸ್ವಾತಂತ್ರ್ಯವೂ ಸಿಗುವುದಿಲ್ಲ. ಇದು ಸಮಾನತೆ ಮತ್ತು ನ್ಯಾಯದ ವಿರುದ್ಧವಾಗಿದೆ. ಈ ಸಮಸ್ಯೆಗಳ ಪರಿಹಾರಕ್ಕಾಗಿ ಸಮಾಜದ ಎಲ್ಲರೂ ತಮ್ಮ ತಮ್ಮ ಜವಾಬ್ದಾ–ರಿಗಳನ್ನು ಅರಿತು ಕಾರ್ಯನಿರ್ವಹಿಸಬೇಕು.

**ಶಿಕ್ಷಣದ ಮಹತ್ವ:**

ಶಾಲಾ ಮಟ್ಟದಲ್ಲಿಯೇ ಮಕ್ಕಳಿಗೆ ಮಹಿಳೆಯರ ಗೌರವ, ಸಮಾನತೆ ಮತ್ತು ಸುರಕ್ಷತೆ ಕುರಿತು ಶಿಕ್ಷಣ ನೀಡಬೇಕು. ಹುಡುಗರಿಗೂ ಮತ್ತು ಹುಡುಗಿಯ–ರಿಗೂ ಮಹಿಳೆಯರನ್ನು ಗೌರವಿಸುವ ಮೌಲ್ಯಗಳನ್ನು ಕಲಿಸಬೇಕು. ಶಿಕ್ಷಣವೇ ಮಹಿಳೆಯರನ್ನು ಶಕ್ತಿಶಾಲಿಗಳನ್ನಾಗಿಸುವ ಮುಖ್ಯ ಸಾಧನವಾಗಿದೆ.

ಸಮಾನ ಉದ್ಯೋಗ ಅವಕಾಶಗಳು:

ಮಹಿಳೆಯರಿಗೆ ಪುರುಷರಂತೆ ಸಮಾನ ಉದ್ಯೋಗ ಅವಕಾಶಗಳು ಹಾಗೂ ಸಮಾನ ವೇತನ ದೊರೆಯಬೇಕು. ಅವರ ಪ್ರತಿಭೆ ಮತ್ತು ಶ್ರಮಕ್ಕೆ ಸಮಾನ ಮೌಲ್ಯ ನೀಡಬೇಕು. ಮಹಿಳೆಯರು ನಾಯಕತ್ವ ಸ್ಥಾನಗಳಲ್ಲಿಯೂ ಹೆಚ್ಚಿನ ಅವಕಾಶಗಳನ್ನು ಪಡೆಯಬೇಕು.

**ಮಹಿಳಾ ಸುರಕ್ಷತೆ:**

ಮಹಿಳೆಯರ ಸುರಕ್ಷತೆಯನ್ನು ಖಚಿತಪಡಿಸುವುದು ಸರ್ಕಾರದ ಪ್ರಮುಖ ಜವಾಬ್ದಾರಿ. ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು ಮಹಿಳೆಯರ ಮೇಲೆ ನಡೆಯುವ ಅನ್ಯಾಯಗಳನ್ನು ತಡೆಯಬೇಕು. ಸಾರ್ವಜನಿಕ ಸ್ಥಳಗಳು, ಕೆಲಸದ ಸ್ಥಳಗಳು ಹಾಗೂ ಶಿಕ್ಷಣ ಸಂಸ್ಥೆಗಳು ಮಹಿಳೆಯರಿಗೆ ಸುರಕ್ಷಿತವಾಗಿರಬೇಕು.

**ಪುರುಷರ ಜವಾಬ್ದಾರಿ:**

ಪುರುಷರು ಮಹಿಳೆಯರನ್ನು ಗೌರವದಿಂದ ಕಾಣಬೇಕು. ಕುಟುಂಬದಲ್ಲಿ, ಕೆಲಸದ ಸ್ಥಳದಲ್ಲಿ ಹಾಗೂ ಸಮಾಜದಲ್ಲಿ ಮಹಿಳೆಯರಿಗೆ ಬೆಂಬಲ ನೀಡುವುದು ಪ್ರತಿಯೊಬ್ಬ ಪುರುಷನ ಕರ್ತವ್ಯ. ಮಹಿಳೆಯರ ಗೌರವವನ್ನು ಕಾಪಾಡುವುದು ಪ್ರತಿಯೊಬ್ಬ ನಾಗರಿಕನ ಹೊಣೆಗಾರಿಕೆಯಾಗಿದೆ.

ನಿರಂತರ ಪ್ರಯತ್ನ ಅಗತ್ಯ:

ಮಹಿಳೆಯರನ್ನು ಕೇವಲ ಒಂದು ದಿನ ಮಾತ್ರ ಪ್ರಶಂಸಿಸುವುದು ಸಾಕಾಗುವುದಿಲ್ಲ. ಮಹಿಳೆಯರ ಹಕ್ಕು, ಸುರಕ್ಷತೆ ಮತ್ತು ಸಮಾನತೆಯಿಗಾಗಿ ಪ್ರತಿದಿನವೂ ನಿರಂತರವಾಗಿ ಕೆಲಸ ಮಾಡುವುದು ಅಗತ್ಯ. ಮಹಿಳೆಯರು ಸಮಾಜದ ಸಮಾನ ಭಾಗಿಯಾಗಿರುವುದನ್ನು ಎಲ್ಲರೂ ಒಪ್ಪಿಕೊಳ್ಳಬೇಕು.

ಇಂದಿನ ಮಹಿಳೆಯರಿಗೆ ಅಗತ್ಯವಾದ ಹಕ್ಕುಗಳು ಮತ್ತು ಅವಕಾಶಗಳು:

ಇಂದಿನ ಮಹಿಳೆಯರಿಗೆ ಉತ್ತಮ ಶಿಕ್ಷಣ, ಆರೋಗ್ಯ ಸೇವೆ, ಆರ್ಥಿಕ ಸ್ವಾವಲಂಬನೆ, ಸುರಕ್ಷಿತ ಕೆಲಸದ ವಾತಾವರಣ ಮತ್ತು ಸಮಾಜದಲ್ಲಿ ಗೌರವದ ಸ್ಥಾನ ಅಗತ್ಯ. ಮಹಿಳೆಯರು ತಮ್ಮ ಪ್ರತಿಭೆಯನ್ನು ಬೆಳಸಿಕೊಳ್ಳಲು ಸರ್ಕಾರ ಮತ್ತು ಸಮಾಜವು ಹೆಚ್ಚಿನ ಅವಕಾಶಗಳನ್ನು ನೀಡಬೇಕು. ಮಹಿಳಾ ಸ್ವಸಹಾಯ ಸಂಘಗಳು, ಉದ್ಯಮ ತರಬೇತಿ ಹಾಗೂ ನಾಯಕತ್ವ ತರಬೇತಿಗಳ ಮೂಲಕ ಮಹಿಳೆಯರನ್ನು ಶಕ್ತಿಶಾಲಿಗಳನ್ನಾಗಿಸಬೇಕು.

ಮಹಿಳೆಯರಿಗೆ ಪ್ರೇರಣೆಯಾದ ಅನೇಕ ಮಹಾನ್ ವ್ಯಕ್ತಿಗಳು ನಮ್ಮ ದೇಶದಲ್ಲಿದ್ದಾರೆ. ಅವರಲ್ಲಿ ಮದರ್ ತೆರೆಸಾ ಮಾನವೀಯತೆ ಮತ್ತು ಸೇವೆಯ ಪ್ರತಿರೂಪ. ಅವರು ಬಡವರು, ಅನಾಥರು ಮತ್ತು ರೋಗಿಗಳ ಸೇವೆಗೆ ತಮ್ಮ ಜೀವನವನ್ನು ಅರ್ಪಿಸಿದರು. ಅವರ ಸೇವಾ ಮನೋಭಾವ ಇಂದಿಗೂ ಜಗತ್ತಿಗೆ ಪ್ರೇರಣೆ ನೀಡುತ್ತದೆ.

ಹಾಗೆಯೇ ಇಂದಿರಾ ಗಾಂಧಿ ಭಾರತದ ಮೊದಲ ಮಹಿಳಾ ಪ್ರಧಾನಮಂತ್ರಿ. ಅವರು ಧೈರ್ಯ, ನಾಯಕತ್ವ ಮತ್ತು ದೃಢನಿಶ್ಚಯದಿಂದ ದೇಶವನ್ನು ಮುನ್ನಡೆಸಿದ ಶಕ್ತಿಶಾಲಿ ನಾಯಕಿ. ಅವರ ಜೀವನ ಮಹಿಳೆಯರು ಯಾವುದೇ ಕ್ಷೇತ್ರದಲ್ಲಿಯೂ ಸಾಧನೆ ಮಾಡಬಹುದು ಎಂಬುದಕ್ಕೆ ಮಹತ್ತರ ಉದಾಹರಣೆ.

ಇಂದಿನ ಸಮಾಜದಲ್ಲಿ ಮಹಿಳೆಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಕುಟುಂಬದ ಬೆಳವಣಿಗೆ, ಮಕ್ಕಳ ಶಿಕ್ಷಣ, ಸಮಾಜದ ಅಭಿವೃದ್ಧಿ ಹಾಗೂ ದೇಶದ ಪ್ರಗತಿಯಲ್ಲಿ ಮಹಿಳೆಯರ ಪಾತ್ರ ಅಳತೆಯಿಲ್ಲದದ್ದು. ಆದ್ದರಿಂದ ಮಹಿಳೆಯರ ಸುರಕ್ಷತೆ, ಗೌರವ ಮತ್ತು ಸಮಾನ ಅವಕಾಶಗಳನ್ನು ಕಾಪಾಡುವುದು ನಮ್ಮ ಸಮಾಜದ ಮುಖ್ಯ ಜವಾಬ್ದಾರಿ. ಮಹಿಳೆಯರನ್ನು ಗೌರವಿಸುವುದು, ಅವರಿಗೆ ಉತ್ತಮ ಶಿಕ್ಷಣ ಮತ್ತು ಸಮಾನ ಅವಕಾಶಗಳನ್ನು ನೀಡುವುದು ಹಾಗೂ ಸುರಕ್ಷಿತ ಸಮಾಜವನ್ನು ನಿರ್ಮಿಸುವುದು ನಮ್ಮ ಕರ್ತವ್ಯ. ಮಹಿಳೆಯರ ಶಕ್ತಿ ಮತ್ತು ಸಾಮರ್ಥ್ಯವನ್ನು ಗುರುತಿಸಿ ಅವರನ್ನು ಉತ್ತೇಜಿಸುವುದು ಸಮಾಜದ ಅಭಿವೃದ್ಧಿಗೆ ಅತ್ಯಂತ ಅಗತ್ಯ. ಮಹಿಳೆ ಎಂದರೆ ಪ್ರೀತಿ, ಶಕ್ತಿ, ತ್ಯಾಗ ಮತ್ತು ಪ್ರೇರಣೆ. ಮಹಿಳೆಯನ್ನು ಗೌರವಿಸುವ ಸಮಾಜವೇ ನಿಜವಾದ ಅಭಿವೃದ್ಧಿಯ ಸಮಾಜ.

ಅಂತರರಾಷ್ಟ್ರೀಯ ಮಹಿಳಾ ದಿನದ ಶುಭಾಶಯಗಳು



ಲಾಜರ್ ಸಿರಿಲ್.ಜಿ

# ಸಾವಿತ್ರಿಬಾಯಿ ಫುಲೆ ಪುತ್ಥಳಿ ಸ್ಥಾಪಿಸಲು ಒತ್ತಾಯ

ನೈಜ್ಯ ದೆಸೆ ನ್ಯೂಸ್



**ರಾಯಚೂರು: ಇಲ್ಲಿನ ನವೋದಯ ಮೆಡಿಕಲ್ ಕಾಲೇಜು ಎದುರು ಸಾವಿತ್ರಿಬಾಯಿ ಫುಲೆ ಪುತ್ಥಳಿ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಅಖಂಡ ಕರ್ನಾಟಕ ಹೂಗಾರ ಮಹಾಸಭಾದ ಪದಾಧಿಕಾ–ರಿಗಳು ಮಹಾನಗರ ಪಾಲಿಕೆ ಆಯುಕ್ತ ಜುಬಿನ್ ಮೊಹಾಪಾತ್ರಅವರಿಗೆಶನಿವಾರಮನವಿ ಸಲ್ಲಿಸಿದರು.**

ಮಹಾನಗರ ಪಾಲಿಕ ಸಿಬ್ಬಂದಿ ನಗರದ ನವೋದಯ ಮೆಡಿಕಲ್ ಕಾಲೇಜಿನ ಮುಂದೆ ಇರುವ ಸಾವಿತ್ರಿಬಾಯಿ ಫುಲೆ ನಾಮಫಲಕವನ್ನು ಕಿತ್ತು ಹಾಕಲು ಬಂದಿದ್ದರು. ಕಳೆದ ಆರು ವರ್ಷಗಳ ಹಿಂದೆ ಮಾಜಿ ಸಂಸದ ಅಮರೇಶ್ವರ ನಾಯಕ ಹಾಗೂ ನಗರ ಶಾಸಕ ಡಾ.ಶಿವರಾಜ ಪಾಟೀಲ, ಸಮಾಜದ ಮುಖಂಡರ ನೇತೃತ್ವದಲ್ಲಿ ಸಾವಿತ್ರಿಬಾಯಿ ಫುಲೆ ನಾಮಫಲಕ ಅನಾವರಣಗೊಳಿಸಲಾಗಿದೆ ಎಂದು ಹೇಳಿದರು. ಇಂದಿಗೂ ಸಾವಿತ್ರಿಬಾಯಿ ಫುಲೆ ಜಯಂತ್ಯುತ್ಸವದ ದಿನ ಅದೇ ಸ್ಥಳದಲ್ಲಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ನಗರಸಭೆ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿ ನಾಮಫಲಕ ಮತ್ತು ಭಾವಚಿತ್ರ ಹೊಂದಿದ ಫಲಕ ಅಳವಡಿಸಲಾಗಿ–ತ್ತು. ಪುತ್ಥಳಿ ಸ್ಥಾಪನೆಗೆ ಎನ್.ಎಸ್.ಬೋಸರಾಜು ಅವರು 5 ಲಕ್ಷ ಹಾಗೂ ನಗರ ಶಾಸಕ ಡಾ.ಶಿವರಾಜ ಪಾಟೀಲ 5 ಲಕ್ಷ ಅನುದಾನ ಮಂಜೂರು ಮಾಡಿದ್ದಾರೆ ಎಂದು ತಿಳಿಸಿದರು. ಜಿಲ್ಲಾ ಪಂಚಾಯಿತಿ ಎಂಜಿನಿಯರ್ ಜಾಗದ ಮಾಲೀಕರು ತಕರಾರು ಮಾಡಿದ್ದಾರೆ ಎಂದು ದೂರಿದರು. ನಗರದ ಎಲ್ಲಾ ಸಮುದಾಯದ ಜನರು ಮತ್ತು ಸಾವಿತ್ರಿಬಾಯಿ ಫುಲೆ ಅಭಿಮಾನಿಗಳು ಪುತ್ಥಳಿ ಸ್ಥಾಪನೆಗೆ ಅವಕಾಶ ನೀಡಬೇಕು ಎಂದು ಆಗ್ರಹಿಸಿದರು. ಬಿಜೆಪಿ ಮುಖಂಡ ರವಿಂದ್ರ ಜಲ್ದಾರ್, ಭೀಮಣ್ಣ ಮಂಚಾಲಿ, ರಾಘವೇಂದ್ರ ಬೋರಡ್ಡಿ, ಶಶಿರಾಜ, ಈರಣ್ಣ ಹೂಗಾರ ಉಪಸ್ಥಿತರಿದ್ದರು.

# ಹೆಣ್ಣು ಗಂಡುಗಳಲ್ಲಿ ಮೇಲು ಕೀಳುಗಳಿಲ್ಲ: ತಹಸಿಲ್ದಾರ್ ಡಾ.ಹೂಗಾರ

ನೈಜ್ಯ ದೆಸೆ ನ್ಯೂಸ್




**ತಾಳಿಕೋಟಿ: ಆದಿಕಾಲದಿಂದ ಆಧುನಿಕ ಕಾಲದವರೆಗೆ ಎಲ್ಲರ ವಿಚಾರವು ಒಂದೇ, ಅದು ಏನೆಂದರೆ ಹೆಣ್ಣು ಗಂಡುಗಳಲ್ಲಿ ಮೇಲು ಕೀಳುಗಳಿಲ್ಲ,ಆ–ತ್ಮಕ್ಕೆ ಜಾತಿ,ಲಿಂಗಗಳ ಭೇದವಿಲ್ಲ ಎಂದು ತಾಳಿಕೋಟೆಯ ತಾಲ್ಲುಕು ದಂಡಾಧಿಕಾರಿಗಳಾದ ಡಾ.ವಿನಯಾ ಹೂಗಾರ ಅವರು ಮಾತನಾಡಿದರು. ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ,ಯುವ ಘಟಕ ಹಾಗೂ ಕದಳಿ ವೇದಿಕೆ ತಾಳಿಕೋಟೆ ತಾಲ್ಲೂಕು ಘಟಕ ವತಿಯಿಂದ ದತ್ತಿ ಉಪನ್ಯಾಸ ಹಾಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮವನ್ನು ಶುಕ್ರವಾರ ಸಾಯಂಕಾಲದಂದು ಪಟ್ಟಣದ ಕಾಳಿಕಾಮಾತೆ ದೇವಾಲಯದಲ್ಲಿ ಹಮ್ಮಿಕೊಳ್ಳಲಾಗಿತ್ತು.**

ಈ ಕಾರ್ಯಕ್ರಮದಲ್ಲಿ ಮುಖ್ಯ ಉಪನ್ಯಾಸಕರಾಗಿ ಭಾಗವಹಿಸಿದ ತಾಲ್ಲೂಕು ದಂಡಾಧಿಕಾರಿಗಳಾದ ಡಾ. ವಿನಯಾ ಹೂಗಾರ ಅವರು " ಮಹಿಳಾ ಸಬಲೀಕರಣ–ಕ್ಕೆ ಶಿವಶರಣರ ಕೊಡುಗೆ" ಎಂಬ ವಿಷಯವಾಗಿ ಅವರು ಮಾತನಾಡಿ,ಸ್ತ್ರೀ ವಾದ ಪುರುಷವಾದ ಎಂದು ಸಮಾಜದಲ್ಲಿ ಏರುಪೇರುಗಳನ್ನುಂಟು ಮಾಡುವುದಲ್ಲ,ಸಮ ಸಮಾಜವನ್ನು ಕಟ್ಟುವ ಕನಸು ಆಗಬೇಕಿದೆ.ಮಕ್ಕಳಿಗೆ ವಚನ ತತ್ವದ ಅರಿವು ಮೂಡಿಸಬೇಕಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಲಿಂ.ಶರಣ ಶಂಕ್ರಪ್ಪ ಪರಪ್ಪ ಸರ ಶೆಟ್ಟಿ , ಲಿಂ.ಶರಣ ಪರಪ್ಪ ದೇವಪ್ಪ ಸರ ಶೆಟ್ಟಿ ಹಾಗೂ ಲಿಂ.ಶರಣೆ ದಾನಮ್ಮ ಪರಪ್ಪ ಸರ ಶೆಟ್ಟಿ ಅವರ ಸಂಸ್ಮರಣೆಯ ಅಂಗವಾಗಿ ಶರಣೆ ಶ್ರೀಮತಿ ಸುಮಂಗಲ ಈರಣ್ಣ ಕಲಬುರ್ಗಿ ಅವರು ದತ್ತಿದಾನಿಗಳಾಗಿದ್ದು ಅವರನ್ನು ವೇದಿಕೆ ಮೂಲಕ ಸನ್ಮಾನಿಸಲಾಯಿತು. ಸಮಾಜ ಮುಖಿಯಾಗಿ ಕೆಲಸಮಾಡಿ ,ಹಸಿದವರಿಗೆ ಅನ್ನ ನೀಡುವ ,ತೃಷೆಯಾದಾಗ ನೀರುಣಿಸುವ ದಾಸೋಹ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು ಲಿಂ ಎಸ್.ಪಿ.ಸರಶೆಟ್ಟಿ ಅವರು ಹಾಗೂ ಅವರ ಸಮಗ್ರ ಕುಟುಂಬ ಶರಣರ ತತ್ವದಂತೆ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆ ಎಂದು ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶಿಕ್ಷಕ ಸಾಹಿತಿ ಸಾಹೇಬಗೌಡ ಬಿರಾದಾರ ಅವರು ದತ್ತಿ ಸಂಸ್ಮರಣೆ ಕುರಿತು ಮಾತನಾಡಿದರು. ಇದೆ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಎಸ್ ಕೆ ಮಹಿಳಾ ಕಾಲೇಜಿನ ಉಪನ್ಯಾಸಕಿ ಜ್ಯೋತಿ ಹಿರೇಮಠ ಮಾತನಾಡಿ ಆಯ್ದಕ್ಕಿ ಲಕ್ಕಮ್ಮನಿಂದ ಇಂದಿನವರೆಗೂ ಸಾಂಸ್ಕೃತಿ–ಕವಾಗಿ ಮಹಿಳೆಯರು ಮುನ್ನಡೆಯತ್ತಿದ್ದಾರೆ.ಹೆಣ್ಣಾಗಿ ಹುಟ್ಟಿದ್ದೇವೆ ಎಂಬುದಕ್ಕೆ ಹೆಮ್ಮೆಪಡೋಣ ಎಂದು ಸಾಧಕಿಯರ ಹೆಸರುಗಳನ್ನು ತಿಳಿಸುತ್ತ ಜಗದ ಸಾಧನೆಗೆ ಹೆಣ್ಣು ಮಕ್ಕಳ ಕೊಡುಗೆ ಅಪಾರ ಎಂದರು.

ವೇದಿಕೆಯ ಮೇಲೆ ಶ್ರೀಮತಿ ಸುರೇಖಾ ಬಿಳೇಬಾವಿ, ನಿರ್ದೇಶಕರು, ಶಾರದಾದೇವಿ ಮಹಿಳಾಬ್ಯಾಂಕ್,ತಾಳಿಕೋಟೆ ಅವರು ಮಹಿಳೆಯರ ತ್ಯಾಗ ಮತ್ತು ಮಹತ್ವ ಕುರಿತು ಮಾತನಾಡಿದರು. ಕದಳಿವೇದಿಕೆಯ ತಾಲ್ಲೂಕು ಅಧ್ಯಕ್ಷರಾದ ಶ್ರೀಮತಿ ಉಮಾ ಘಿವಾರಿ ಅವರು ಮಾತನಾಡಿ ಶಿವಶರಣರು ಮಹಿಳಾ ಸಬಲೀಕರಣಕ್ಕೆ ನಾಂದಿ ಹಾಡಿದ್ದಾರೆ.ಈ ಆಧುನಿಕ ಕಾಲದಲ್ಲಿ ಮಹಿಳೆಯರು ಎಲ್ಲಾ ರಂಗದಲ್ಲಿ ಸಾಧಕರಾಗಿದ್ದಾರೆ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡು ಮಾತನಾಡಿದರು.

ಕಾರ್ಯಕ್ರಮದಲ್ಲಿ ಡಾ.ಗುರುಪಾದ ಘೀವಾರಿ, ಈರಣ್ಣ ಕಲಬುರ್ಗಿ,ಜೆ ಎಸ್,ಜಂಬಲದಿನ್ನಿ ಗುರುಗಳು, ಶಿವಲಿಂಗಪ್ಪ ಪಾಲ್ಕಿ,ರಮೇಶ ಸಾಲಂಕಿ,ಶರಣಬಸಪ್ಪ ಗಡೇದ,ಅವ್ವನಗೌಡ ಗೋನಾಲ,– ಎಮ್.ಎಸ್.ನಾಗರಾಳ,ಭೀಮಣ್ಣ ಸುಳೆಬಾವಿ,ಜಗದೀಶ ಬಿಳೇಬಾವಿ,ಅಶೋಕ ಚಿನಗುಡಿ,ಅಪ್ಪು ಕಲ್ಲೂರ,ಸಿದ್ದು ಕರಡಿ, ಕಾಶಿನಾಥ ಸಜ್ಜನ,ವಿಜಯಕುಮಾರ ಮೇಲಿನಮನಿ ಉಪಸ್ಥಿತರಿದ್ದರು. ಕುಮಾರಿ ಸನ್ನಿಧಿ ಸಜ್ಜನ 500 ವಚನ ಕಂಠಪಾಠ ಮಾಡಿರುವ ಸಾಧನೆಗೆ ಸನ್ಮಾನಿಸಲಾಯಿತು. ,ಹೆಣ್ಣು ಮಕ್ಕಳ ಕುರಿತ ಸ್ವರಚಿತ ಹಾಡನ್ನು ಜಯಶ್ರೀ ಸಜ್ಜನ ಅವರು ಹಾಡಿದರು. ಉಮಾ ಸಾಲಂಕಿ ಸ್ವಾಗತಿಸಿದರು, ಸಂಗೀತಾ ಬಳಗಾನೂರ ಪರಿಚಯ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ವಿಶಾಲಾಕ್ಷಿ ಬಡಿಗೇರ ಪ್ರಾರ್ಥಿಸಿದರು.ರತ್ನಕಲಾ ಸರಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು,ಸುವರ್ಣಾ ಗೋನಾಲ ವಂದಿಸಿದರು.